ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ 41ನೇ ಸಂಚಿಕೆ ಕೊಪ್ಪ 22-6-1986 ಭಾನುವಾರ ಬೆಲೆ 40 ಪೈಸೆ

ಕ್ಷುಲ್ಲಕ ವಿಷಯಕ್ಕೆ ಹೊಡೆದಾಟ:

ಊರಿಗುಪಕಾರಿಯು ಕೊಲೆ

ಜಯಪುರ: ಕ್ಷುಲ್ಲಕ ವಿಷಯವೊಂದಕ್ಕೆ ಕ್ಷುಲ್ಲಕ ವ್ಯಕ್ತಿಗಳ ನಡುವೆ ನಡೆದ ಹೊಡೆದಾಟದಿಂದ 'ಊರಿಗುಪಕಾರಿ'ಯಾಗಿದ್ದ ಸಜ್ಜನ ವ್ಯಕ್ತಿಯೊಬ್ಬರು ಕೊಲೆಯಾದ ದಾರುಣ ಘಟನೆ ಇಲ್ಲಿ ಜೂನ್ 19ರಂದು ನಡೆಯಿತು

ಮೃತ ಪಟ್ಟವರು ಇಲ್ಲಿನ ತಾಜ್ ಹೋಟೆಲಿನ ಮಾಲೀಕ ಮತ್ತು ಕಂಟ್ರಾಕ್ಟರ್ ಟಿ. ಅಹಮದ್ ಎಂಬವರು. ಅವರ ಅಳಿಯ ಖಾದರ್ ಬೆನ್ನಿಗೆ ಆದ ತೀವ್ರ ಇರಿತದಿಂದ ಮಣಿಪಾಲದ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ.

ಆರೋಪಿಗಳು ನಾಪತ್ತೆ

ಕೊಲೆಯ ಪ್ರಮುಖ ಆರೋಪಿಗಳಾದ ರಮೇಶ್ ಮತ್ತು ಕೃಷ್ಣ ಹಾಗೂ ಅವರಿಗೆ ನೆರವು ನೀಡಿದವರೆನ್ನಲಾಗಿರುವ ಹಲವರು ತಲೆ ತಪ್ಪಿಸಿ ಕೊಂಡಿದ್ದಾರೆನ್ನಲಾಗಿದೆ.

ಗಾರೆ ಕೆಲಸದ ರಮೇಶ್ ಇಲ್ಲಿಯ ಮೋಚಿಯೊಬ್ಬರ ಮಗನಾಗಿದ್ದು, ಕೃಷ್ಣ ಕಟ್ಟೆಮನೆಯ ಮಿಲ್‌ನಲ್ಲಿ ಹಮಾಲಿಯಾಗಿದ್ದನು.

ಹಿನ್ನೆಲೆ

ಘಟನೆಗೆ 2 ದಿನದ ಹಿಂದೆ ಸಮೀಪದ ಕಟ್ಟೆಮನೆಯ ಮುಸ್ಲಿಮರ ಬಡ ಹೋಟೆಲಲ್ಲಿ ಒಬ್ಬ ಭಿಕ್ಷುಕ ಕಾಫಿ-ತಿಂಡಿ ಮುಗಿಸಿ ಎರಡೂವರೆ ರೂ. ಬಿಲ್ ಕೊಡದೆ ಹೊರಟಾಗ ಅಲ್ಲೇ ಚಾ ಕುಡಿಯುತ್ತಿದ್ದ ಖಾದರ್ ಕಡೆಯ ಇಬ್ಬರು ಯುವಕರು ಆತನನ್ನು ಬಿಲ್ ಕೊಟ್ಟು ಹೋಗುವಂತೆ ಬಲಾತ್ಕರಿಸಿದರೆಂದೂ, ಆಗ ಅಲ್ಲಿ ಚಾ ಕುಡಿಯುತ್ತಿದ್ದ ರಮೇಶ್ ಮತ್ತು ಕೃಷ್ಣ ಇದಕ್ಕೆ ಆಕ್ಷೇಪಿಸಿ, ತಾವು ದುಡ್ಡು ಕೊಡುವುದಾಗಿ ಹೇಳಿದಾಗ ಜಗಳವಾಗಿ ಚಪ್ಪಲಿಯಿಂದ ಈ ಇಬ್ಬರಿಗೆ ಹೊಡೆದರೆಂದೂ ಹೇಳಲಾಗಿದೆ. ಈ ಬಗ್ಗೆ ಪೋಲೀಸಿಗೆ ದೂರು ನೀಡಿದ್ದಕ್ಕೆ ಅವರು ರಮೇಶ್, ಕೃಷ್ಣರನ್ನು ಕರೆಸಿ, ಎಚ್ಚರಿಕೆ ನೀಡಿ ಕಳಿಸಿದ್ದರೆನ್ನಲಾಗಿದೆ.

ಮರುದಿನ ಖಾದರ್ ಮತ್ತು ಸಂಗಡಿಗರು ಕಟ್ಟೆಮನೆಗೆ ಹೋಗಿ ರಮೇಶನನ್ನು ಥಳಿಸಿದರೆಂದೂ ಕೃಷ್ಣ ಸಿಕ್ಕಲಿಲ್ಲವೆಂದೂ, ಜೂನ್ 19ರಂದೂ ಸಹ ಪುನಃ ಹಲ್ಲೆಗೆ ಕಾದಿದ್ದರೆಂದೂ ಹೇಳಲಾಗಿದೆ.

ಚೂರಿ ಇರಿತ

ಆದರೆ, ಕಟ್ಟೆಮನೆ ಜನತಾ ಕಾಲೊನಿಯ ನಿವಾಸಿಗಳಾದ ರಮೇಶ ಮತ್ತು ಕೃಷ್ಣ ಕಾಲೊನಿಯಿಂದ 25-30 ಜನರ ಗುಂಪು ಕಟ್ಟಿಕೊಂಡು ಬಂದು ರಾತ್ರಿ ಜಯಪುರದಲ್ಲಿ ಖಾದರ್‌ನಿಗಾಗಿ ಹುಡುಕಾಡಿ, ಅಹಮದರ ಮಗ ಅಬೂಬಕರ್‌ಗೆ ಹೊಡೆಯಲು ಸಿನಿಮಾ ಟಾಕೀಸಿನ ಬಳಿ ಹೊಂಚು ಹಾಕಿದ್ದರೆಂದೂ, ಇದರ ಸುಳಿವು ದೊರೆತು ಆತ ಹಿಂದಿನಿಂದ ತಪ್ಪಿಸಿಕೊಂಡು ಹೋಗಿ ತಂದೆಗೆ ತಿಳಿಸಿದಾಗ ಅವರು ರಾಜಿ ಮಾಡಿಸುವ ಉದ್ದೇಶದಿಂದ ಅಳಿಯನೊಂದಿಗೆ ಟಾಕೀಸಿಗೆ ಬಂದಾಗ ಗುಂಪು ಖಾದರ್ ಮೇಲೆ ಹಲ್ಲೆ ನಡೆಸಿತೆಂದೂ ತಿಳಿದುಬಂದಿದೆ. ರಮೇಶ ಚೂರಿಯಿಂದ ಆತನ ಬೆನ್ನಿಗೂ, ತಪ್ಪಿಸಲು ಹೋದ ಅಹಮದರಿಗೆ ಹೊಟ್ಟೆಗೂ ಇರಿದನೆಂದು ಹೇಳಲಾಗಿದೆ.

ಕೂಡಲೇ ರಕ್ತದ ಮಡುವಿನಲ್ಲಿ ಬಿದ್ದ ಅವರಿಬ್ಬರನ್ನು ಡಾ|| ಯೋಗಪ್ಪನವರ ಸಲಹೆಯಂತೆ ಕೊಪ್ಪ ಆಸ್ಪತ್ರೆಗೆ ಒಯ್ದು ಸ್ವಲ್ಪ ಹೊತ್ತಿನಲ್ಲಿ ಅಹಮದ್ ಅಸುನೀಗಿದರೆಂದೂ ತೀವ್ರ ಸ್ಥಿತಿಯಲ್ಲಿದ್ದ ಖಾದರ್‌ರನ್ನು ಕೂಡಲೇ ಮಣಿಪಾಲಕ್ಕೆ ಒಯ್ಯಲಾಯಿತೆಂದೂ ಗೊತ್ತಾಗಿದೆ.

ಊರವರ ಸಂತಾಪ

3 ತಿಂಗಳ ಒಂದು ಮಗುವೂ ಸೇರಿದಂತೆ ಹತ್ತು ಮಕ್ಕಳ ತಂದೆಯಾದ ಅಹಮದ್ ಅಷ್ಟೇನೂ ಅನುಕೂಲಸ್ಥರಲ್ಲದಿದ್ದರೂ ಯಾರೊಂದಿಗೂ ವಿರೋಧವಿಲ್ಲದೆ ಎಲ್ಲರಿಗೂ ಉಪಕಾರಿಯಾಗಿದ್ದರೆನ್ನುವ ಇಡೀ ಊರ ಜನ ಅವರ ನಿಧನದ ಬಗ್ಗೆ ಬಹಳ ಸಂತಾಪ ಪಡುತ್ತಿದ್ದಾರೆ. ಅವರ ಗೌರವಾರ್ಥ ಒಂದು ದಿನ ಊರಿನಲ್ಲಿ ಬಹುತೇಕ ಅಂಗಡಿ-ಮುಂಗಟ್ಟುಗಳು ಮುಚ್ಚಿದ್ದವು.

ಹೆಚ್ಚಿನ ಗಲಭೆಗೆ ಅವಕಾಶವಾಗದಂತೆ ಪೋಲೀಸರು ಪೂರ್ಣ ಮುಂಜಾಗ್ರತೆ ವಹಿಸಿದ್ದು, ಎಸ್ಪಿ ಸುಸಂತ್ ಮಹಾಪಾತ್ರ, ಡಿವೈ ಎಸ್ಪಿ ರಮೇಶ್ ಹರಿಹರ ಅವರುಗಳು 20ರಂದು ಭೇಟಿ ಕೊಟ್ಟಿದ್ದರು. ಕೊಪ್ಪದ ಹೊಸ ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸುತ್ತಿದ್ದಾರೆ.

ವಿದ್ಯುತ್ ಇಲಾಖೆ ಬೇಜವಾಬ್ದಾರಿಗೆ ವಿದ್ಯಾರ್ಥಿನಿ ಬಲಿ ?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಶಾಲೆಗೆ ಬರುತ್ತಿದ್ದ ಪುಟ್ಟ ಬಾಲಕಿಯೊಬ್ಬಳು ಮಳೆಯಿಂದಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಇಲ್ಲಿಗೆ ಸಮೀಪದ ಹೊನ್ನವಳ್ಳಿಯಲ್ಲಿ ನಡೆದಿದೆ.

ಹೊನ್ನವಳ್ಳಿ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿನಿ ವಿಜಯಲಕ್ಷ್ಮಿ ಎಂಬ 10 ವರ್ಷದ ಬಾಲಕಿಯೇ ಈ ದುರ್ಘಟನೆಗೆ ಬಲಿಯಾದವಳು.

ಈ ವಿದ್ಯುತ್ ಲೈನು ಬಹಳ ಹಳೆಯದಾಗಿದ್ದುದಲ್ಲದೆ ಕಂಬದಿಂದ ಕಂಬಕ್ಕೆ ಇರುವ ಮಾಮೂಲಿ 180-200 ಅಡಿಗಿಂತಲೂ ಸುಮಾರು 100 ಅಡಿಗಳಷ್ಟು ಹೆಚ್ಚು ಇದ್ದು, ಈ ಅಪಾಯದ ಬಗ್ಗೆ ಸ್ಥಳೀಯರು ಮುಂಚೆಯೇ ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿದ್ದರೆನ್ನಲಾಗಿದೆ. ಲೈನು ನೆಲಕ್ಕುರುಳಿದ ದಿನವೂ ಬೆಳಿಗ್ಗೆ 9 ಗಂಟೆಗೇ ಫೋನ್ ಮೂಲಕ ಇಲಾಖೆಗೆ ತಿಳಿಸಿದ್ದರೂ ಕೂಡಲೇ ವಿದ್ಯುತ್ ನಿಲ್ಲಿಸದಿದ್ದುದೇ ಈ ದುರ್ಘಟನೆಗೆ ಕಾರಣವೆನ್ನಲಾಗಿದೆ.

ಶೃಂಗೇರಿ ಕ. ವಿ. ಮಂ. ಅಧಿಕಾರಿ ಹೇಳಿಕೆ

ಸುಮಾರು 9-9.30ರ ಹೊತ್ತಿಗೆ ಫೋನ್ ಬಂದಿದ್ದು, ಇಬ್ಬರು ಲೈನ್ ಮನ್‌ಗಳನ್ನು ವಿದ್ಯುತ್ ನಿಲ್ಲಿಸಲು ಕಳಿಸಲಾಗಿತ್ತು. ಆ ಲೈನು ಕೊಪ್ಪದ ಕಡೆಯಿಂದ ಸರಬರಾಜು ಆಗುವ ಲೈನು ಆಗಿದ್ದು, ಅದು ಹರಿಹರಪುರ ಅಡ್ಡಗದ್ದೆಯಲ್ಲಿ ಇದ್ದ ಕಾರಣ ಕೂಡಲೇ ನಿಲ್ಲಿಸಲಾಗಲಿಲ್ಲ. ಅಷ್ಟರಲ್ಲಿ ದುರ್ಘಟನೆ ನಡೆದು ಹೋಗಿರಬೇಕು. ಹಾಗೆಯೇ ಅಲ್ಲಿ ಕಂಬದಿಂದ ಕಂಬಕ್ಕೆ ದೂರ ಜಾಸ್ತಿ ಇರುವುದಕ್ಕೆ ಕೆಳಗೆ ತುಂಬಾ ತಗ್ಗು ಪ್ರದೇಶ ಇರುವುದು ಕಾರಣವಾಗಿದೆ ಎಂದು ಶೃಂಗೇರಿಯ ಕ. ವಿ. ಮಂ. ಅಧಿಕಾರಿ ತಿಳಿಸಿದ್ದಾರೆ. (4ನೇಪುಟಕ್ಕೆ)

ಹಸಿರಿನ ಹೆಸರು ಮಾಡಿದ ಅರಣ್ಯಾಧಿಕಾರಿಗೆ ಎತ್ತಂಗಡಿ ಎಷ್ಟು ಸಮಂಜಸ ?

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸರ್ಕಾರಿ ಅಧಿಕಾರಿಗಳೆಂದರೆ ವರ್ಗಾವಣೆ ಮಾಮೂಲು. ಅದು ಅಗತ್ಯವೂ ಹೌದು. ಆದರೆ ಉತ್ಸಾಹಿ, ಕಾರ್ಯಶೀಲನಾಗಿದ್ದು, ಅಕ್ರಮ-ಅವ್ಯವಹಾರಗಳನ್ನು ಮೆಟ್ಟಿ ನಿಲ್ಲಿಸಿ ಮೇಲಧಿಕಾರಿಗಳಿಂದಲೂ ಜನತೆಯಿಂದಲೂ ಮೆಚ್ಚುಗೆಯನ್ನೂ, ಕುಪ್ರಸಿದ್ಧ ವ್ಯಕ್ತಿಗಳ ದ್ವೇಷವನ್ನೂ ಗಳಿಸಿದ್ದ ಅಧಿಕಾರಿಯೊಬ್ಬನನ್ನು ಕೇವಲ 2 ವರ್ಷದೊಳಗೆ ಒಂದು ಕಡೆಯಿಂದ ವರ್ಗಾಯಿಸಿದರೆ, ಇದು ಯಾರೋ ರಾಜಕೀಯದವರ ಅಥವಾ ಪ್ರಭಾವಿಗಳ ಬೇಳೆ ಬೇಯಿಸಲು ಆದ ಏರ್ಪಾಡು ಎಂಬುದನ್ನು ಒಂದು ಚಿಕ್ಕ ಮಗುವೂ ಹೇಳುತ್ತದೆ.

ಶೃಂಗೇರಿಯ ವಲಯ ಅರಣ್ಯಾಧಿಕಾರಿಯಾಗಿದ್ದ ಲಕ್ಷ್ಮೀನಾರಾಯಣ ಅವರ ವರ್ಗಾವಣೆ ಇದೇ ಜಾತಿಗೆ ಸೇರುತ್ತದೆಂಬುದು ಶೃಂಗೇರಿ ವಲಯದ ವ್ಯಾಪ್ತಿಯ ಪ್ರತಿಯೊಬ್ಬ ಪ್ರಜ್ಞಾವಂತನ (ಮತ್ತು ಕಾಡು ಕಳ್ಳನಲ್ಲದವನ) ಸ್ಪಷ್ಟ ಅಭಿಪ್ರಾಯವಾಗಿದೆ

ಸಂಬಂಧದ ಕೊಡುಗೆ?

ನಮ್ಮ ಕ್ಷೇತ್ರದ ಶ್ರೀಮಂತ ಪ್ಲಾಂಟರ್‌ರೊಬ್ಬರು ಈಚೆಗೆ ರಾಜ್ಯ ಜನತಾ ಅಧ್ಯಕ್ಷರೊಡನೆ ಬೆಳೆಸಿದ ಸಂಬಂಧದ ಕೊಡುಗೆ ಈ ವರ್ಗಾವಣೆ ಎಂಬ ಮಾತು ಇಲ್ಲಿ ದಟ್ಟವಾಗಿ ಹಬ್ಬಿದೆ.

ಅಂತೂ, ಎರಡು ವರ್ಷಗಳ ಹಿಂದೆ 'ಮಾಫಿ ಪಾಸ್' ಮಾಡಿ ಅರಣ್ಯ ಕೊಳ್ಳೆ ಹೊಡೆದು ಈಗೆರಡು ವರ್ಷಗಳಿಂದ ಬಾಲ ಮುದುರಿಕೊಂಡು ಬೇರೆ ಬೇರೆ ಉದ್ಯೋಗ ಹಿಡಿದಿದ್ದ ಎಲ್ಲಾ ಅಪ್ರಾಮಾಣಿಕ ಅರಣ್ಯ ಕಂಟ್ರಾಕ್ಟರುಗಳೂ ಈ ಅರಣ್ಯಾಧಿಕಾರಿ ಇಲ್ಲಿಂದ ಜಾಗ ಖಾಲಿ ಮಾಡುವುದನ್ನೇ ಕಾದು ಮೊಟ್ಟೆಯೊಡೆದು ಹೊರ ಬರುವ ಮೊಸಳೆ ಮರಿಗಳಂತೆ ಕಣ್ಣು ಬಾಯಿ ತೆರೆದುಕೊಂಡಿದ್ದಾರೆ

ಎರಡು ವರ್ಷಗಳ ಹಿಂದೆ

ಎರಡು ವರ್ಷಗಳಹಿಂದೆ ಒಬ್ಬ ಅದಕ್ಷ, ಅಪ್ರಾಮಾಣಿಕ ರೇಂಜರಿಂದ ಇಲ್ಲಿ ಸಾಕಷ್ಟು ಹಾನಿಯಾಗಿತ್ತು. ಇಂದು ಈ ರೇಂಜರನ್ನು ದೂರುತ್ತಿರುವವರೇ ಅಂದು ಆ ಅಧಿಕಾರಿಯನ್ನು-ಆತನಿಗೆ ಆಗಲೇ ಇಲ್ಲಿ 5 ವರ್ಷ ಆಗಿದ್ದರೂ ಸಹ-ಇನ್ನೂ ಹೆಚ್ಚು ಕಾಲ ಇಲ್ಲೇ ಉಳಿಸಿಕೊಳ್ಳಲು ಅಂದು ಶಾಸಕರಾಗಿದ್ದ ಗೋವಿಂದ ಗೌಡರಿಗೆ ದುಂಬಾಲು ಬಿದ್ದು, ಕೊನೆಗೂ ಅವರಿಗೆ ವರ್ಗವಾದಾಗ 'ಸಂಪದ್ಭರಿತ' ಜಾಗಕ್ಕೆ ಹಾಕಿಸಿ ಕೊಡುವಲ್ಲಿ ಯಶಸ್ವಿಯಾದುದನ್ನು ಯಾರೂ ಮರೆತಂತಿಲ್ಲ

ಆ ಅಧಿಕಾರಿಯ ಅವಧಿಯಲ್ಲಿ ಇಲಾಖೆ ಪೂರ್ಣ ಕುಲಗೆಟ್ಟಿತ್ತು. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಸುಮಾರು 15 ಸಾವಿರ ಮರಗಳು ಜೀವ ಕಳೆದುಕೊಂಡು ಶ್ರೀಮಂತರ ಪಾಲಾಗಿವೆಯೆನ್ನಲಾಗಿದೆ. ಅಂದಿನ ಆಡಳಿತದ ಪಕ್ಷವಾದ ಕಾಂಗ್ರೆಸ್ಸಿಗೆ ತನ್ನ ಜಾತಿಯವರ ಜನಿವಾರ ಹಿಡಿದು ಓಟು ಹಾಕಿಸುವ ಮಟ್ಟಕ್ಕೆ ಸಕ್ರಿಯ ರಾಜಕೀಯ ಮಾಡಿದಂತಹ ವ್ಯಕ್ತಿ ಆತ.

ಕಾರ್ಯದಕ್ಷತೆಗೆ ಸಾಕ್ಷಿ

ಅಂಥ ಅಪ್ರಾಮಾಣಿಕತೆ, ಅದಕ್ಷತೆಗಳ ಒಂದಂಶವನ್ನಾದರೂ ಈ ರೇಂಜರಲ್ಲಿ ಕಾಣಲು ಸಾಧ್ಯವಿಲ್ಲವೆನ್ನುವುದಕ್ಕೆ ಅವರ ಕಾಲದಲ್ಲಿ ಶೃಂಗೇರಿ ವಲಯದಲ್ಲಿ ನೆಟ್ಟು ಬೆಳೆಸಿದ ಪ್ಲಾಂಟೇಶನ್‌ಗಳೇ ಸಾಕ್ಷಿ ಸಾಕು. ಯಾರದೇ ಯಾವುದೇ ಮುಲಾಜಿಲ್ಲದೆ ಅಕ್ರಮ ನಾಟಾ ಕಡಿತದ ಪ್ರತಿಯೊಂದು ಘಟನೆಯನ್ನೂ ಬೆಂಬತ್ತಿ ಕೇಸು, ಜುಲ್ಮಾನೆ ಹಾಕಿ, ನಾಟಾದ ಕಳ್ಳ ಸಾಗಾಣಿಕೆಯನ್ನು ಈ ವಲಯದಲ್ಲಿ ಹೆಚ್ಚು-ಕಡಿಮೆ ಸಂಪೂರ್ಣವಾಗಿ ನಿಲ್ಲಿಸಿದ್ದರೆಂದರೆ ಉತ್ಪ್ರೇಕ್ಷೆಯಲ್ಲ.

ಅಲ್ಲದೆ, ತೀವ್ರ ಬರಗಾಲದ ಸಮಯದಲ್ಲಿ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ ವಿನಯ್ ಲೂಥ್ರರವರ ನೇತೃತ್ವದಲ್ಲಿ, ಊರಿನ, ತಾಲ್ಲೂಕಿನ ಎಲ್ಲಾ ವರ್ಗದ ಜನರನ್ನೂ ಸಂಘಟಿಸಿ, 100 ಲೋಡಿಗೂ ಹೆಚ್ಚು ಹುಲ್ಲನ್ನು ಸಂಗ್ರಹಿಸಿ ರವಾನಿಸುವಲ್ಲಿ ಇವರು ನಿರ್ವಹಿಸಿದ ಪಾತ್ರವನ್ನು ರಾಜ್ಯ ಮಟ್ಟದ ಪತ್ರಿಕೆಗಳೂ ಪ್ರಶಂಸಿಸಿವೆ.

ಇನ್ನೊಬ್ಬ ದಕ್ಷ ಸಿಗುವುದಿಲ್ಲವೆ?

ಕಾಡಿನ ಬಗ್ಗೆ ಅತ್ಯಂತ ಪ್ರೀತಿ ಇರುವ ಮಂತ್ರಿ ಗೋವಿಂದ ಗೌಡರು ಇವರ ದಕ್ಷತೆಯ ಅವಶ್ಯಕತೆ ಚಿಕ್ಕಗ್ರಹಾರ ವಲಯಕ್ಕೆ ಅತೀ ಅಗತ್ಯವಾಗಿದೆ ಎಂದು ಹೇಳಿದ ವದಂತಿ ಇದೆ. ಆದರೆ ಇದು ಎಷ್ಟು ಸಮಂಜಸ ಎಂಬುದನ್ನು ಅವರು ಇನ್ನೊಮ್ಮೆ ಯೋಚಿಸುವುದೊಳಿತು, ಏಕೆಂದರೆ, ಇವರನ್ನು ಇಲ್ಲಿಯೇ

(ನಾಲ್ಕನೇ ಪುಟಕ್ಕೆ)

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

ರಿಜಿಸ್ಟರ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ [illegible] 11ನೇ ಸಂಚಿಕೆ ಕೊಪ್ಪ 22-6-1986 ಭಾನುವಾರ ಬೆಲೆ 40 ಪೈಸೆ

[illegible] ವಿಷಯಕ್ಕೆ [illegible]:

ಊರಿಗುಪಕಾರಿ [illegible]

ಜಯಪುರ: [illegible] ವಿಷಯವೊಂದಕ್ಕೆ [illegible] **ನಡೆದ ಹೊಡೆದಾಟದಿಂದ** [illegible] 'ಊರಿಗುಪಕಾರಿ'ಯಾಗಿದ್ದ ಸಜ್ಜನ [illegible] **ಕೊಲೆಯಾದ** ದಾರುಣ [illegible] ಇಲ್ಲಿ ಜೂನ್ 19ರಂದು ನಡೆಯಿತು.

ಮೃತ [illegible] ಟೆಲಿನ [illegible] ಟಿ. ಅಹಮದ್ [illegible] ಖಾದರ್ [illegible] ಮಣಿಪಾಲದ [illegible] ದ್ದಾರೆ.

ಆರೋಪಿಗಳ [illegible]

ಕೊಲೆ [illegible] ಆರೋಪಿಗಳಾದ ರಮೇಶ್ [illegible] ಅವರಿಗೆ ನೆರವು [illegible] ಹಲವರು ತಲೆ ತಪ್ಪಿಸಿಕೊಂಡಿದ್ದಾರೆನ್ನಲಾಗಿದೆ.

ಗಾರೆ ಕೆಲಸದ ರಮೇಶ್ ಇಲ್ಲಿನ [illegible] ಚಿಯೊಬ್ಬರ ಮಗನಾಗಿದ್ದು, ಕೃಷ್ಣ ಕಟ್ಟೆ ಮನೆಯ [illegible]ಸಲ್ಲಿ ಹಮಾಲಿಯಾಗಿದ್ದನು.

ಹಿನ್ನೆಲೆ

ಘಟನೆಗೆ 2 ದಿನದ ಹಿಂದೆ ಸಮೀಪದ ಕಟ್ಟೆಮನೆಯ ಮುಸ್ಲಿಮರ ಬಡ ಹೋಟೆಲಲ್ಲಿ ಒಬ್ಬ ಭಿಕ್ಷುಕ ಕಾಫಿ–ತಿಂಡಿ ಮುಗಿಸಿ ಎರಡೂ ವರೆ ರೂ. ಬಿಲ್ ಕೊಡದೆ ಹೊರಟಾಗ ಅಲ್ಲೇ ಚಾ ಕುಡಿಯುತ್ತಿದ್ದ **ಖಾದರ್ ಕಡೆಯ** ಇಬ್ಬರು ಯುವಕರು **ಆತನನ್ನು** ಬಿಲ್ ಕೊಟ್ಟು ಹೋಗುವಂತೆ **ಬಲಾತ್ಕರಿಸಿದರೆಂ**ದೂ, ಆಗ [illegible] ರಮೇಶ [illegible] ಕೋಪಿಸಿ, ತಾವು [illegible] ದಾಗ ಜಗ[illegible] ಬ್ಬರಿಗೆ ಹೊಡೆದರೆಂದೂ [illegible] ಬಗ್ಗೆ ಪೋಲಿ[illegible] ಅವರು [illegible] ಎಚ್ಚರಿಕೆ ನೀಡಿ [illegible] ದರೆನ್ನಲಾಗಿದೆ.

ಮರುದಿನ [illegible] ಅಂಗಡಿಗ ರು [illegible] ಸನನ್ನು ಥಳಿಸಿದರೆಂದೂ [illegible] ಎಂದೂ, ಜೂನ್ 19ರಂದು [illegible] ಹಲ್ಲೆಗೆ [illegible]ದ್ದರೆಂದೂ [illegible]

ಚೂರಿ ಇರಿತ

ಆದರೆ, ಕಟ್ಟೆಮನೆ ಜನತಾ ಕಾಲೊನಿಯ ನಿವಾಸಿಗಳಾದ [illegible] ಪುತ್ರ ಕೃಷ್ಣ ಕಾಲೊನಿಯಿಂದ 25–30 ಜನರ ಗುಂಪು ಕಟ್ಟಿಕೊಂಡು ಬಂದು ರಾತ್ರಿ ಜಯಪುರದಲ್ಲಿ ಖಾದರ್‌ನಿಗಾಗಿ ಹುಡುಕಾಡಿ, ಅಹಮದರ ಮಗ ಅಬೂಬಕರ್‌ಗೆ ಹೊಡೆಯಲು ಸಿನಿಮಾ ಟಾಕೀಸಿನ ಬಳಿ ಹೊಂಚು ಹಾಕಿದ್ದರೆಂದೂ, ಇದರ ಸುಳಿವು ದೊರೆತು ಆತ ಹಿಂದಿನಿಂದ ತಪ್ಪಿಸಿಕೊಂಡು ಹೋಗಿ ತಂದೆಗೆ ತಿಳಿಸಿದಾಗ ಅವರು ರಾಜಿ ಮಾಡಿಸುವ ಉದ್ದೇಶದಿಂದ ಅಳಿಯನೊಂದಿಗೆ ಟಾಕೀಸಿಗೆ ಬಂದಾಗ ಗುಂಪು ಖಾದರ್ ಮೇಲೆ ಹಲ್ಲೆ ನಡೆಸಿತೆಂದೂ ತಿಳಿದುಬಂದಿದೆ. ರಮೇಶ ಚೂರಿಯಿಂದ ಆತನ ಬೆನ್ನಿಗೂ, ತಪ್ಪಿಸಲು ಹೋದ ಅಹಮದರಿಗೆ ಹೊಟ್ಟೆಗೂ ಇರಿದನೆಂದು ಹೇಳಲಾಗಿದೆ.

ಕೂಡಲೇ ರಕ್ತದ ಮಡುವಿನಲ್ಲಿ ಬಿದ್ದ ಅವರಿಬ್ಬರನ್ನು ಡಾ|| ಯೋಗಪ್ಪನವರ ಸಲಹೆಯಂತೆ ಕೊಪ್ಪ ಆಸ್ಪತ್ರೆಗೆ ಒಯ್ದು ಸ್ವಲ್ಪ ಹೊತ್ತಿನಲ್ಲಿ ಅಹಮದ್ ಅಸುನೀಗಿದರೆಂದೂ ತೀವ್ರ ಸ್ಥಿತಿಯಲ್ಲಿದ್ದ ಖಾದರ್‌ರನ್ನು ಕೂಡಲೇ ಮಣಿಪಾಲಕ್ಕೆ ಒಯ್ಯಲಾಯಿತೆಂದೂ ಗೊತ್ತಾಗಿದೆ.

ಊರವರ ಸಂತಾಪ

3 ತಿಂಗಳ ಒಂದು ಮಗುವೂ ಸೇರಿದಂತೆ ಹತ್ತು ಮಕ್ಕಳ ತಂದೆಯಾದ ಅಹಮದ್ ಅಷ್ಟೇನೂ ಅನುಕೂಲಸ್ಥರಲ್ಲದಿದ್ದರೂ 'ಯಾರೊಂದಿಗೂ ವಿರೋಧವಿಲ್ಲದೆ ಎಲ್ಲರಿಗೂ ಉಪಕಾರಿಯಾಗಿದ್ದರೆ'ನ್ನುವ ಇಡೀ ಊರ ಜನ ಅವರ ನಿಧನದ ಬಗ್ಗೆ ಬಹಳ ಸಂತಾಪ ಪಡುತ್ತಿದ್ದಾರೆ. ಅವರ ಗೌರವಾರ್ಥ ಒಂದು ದಿನ ಊರಿನಲ್ಲಿ ಬಹುತೇಕ ಅಂಗಡಿ–ಮುಂಗಟ್ಟುಗಳು ಮುಚ್ಚಿದ್ದವು.

ಹೆಚ್ಚಿನ ಗಲಭೆಗೆ ಅವಕಾಶವಾಗದಂತೆ ಪೋಲೀಸರು ಪೂರ್ಣ ಮುಂಜಾಗ್ರತೆ ವಹಿಸಿದ್ದು, ಎಸ್ಪಿ ಸುಸಂತ್ ಮಹಾಪಾತ್ರ, ಡಿವೈ ಎಸ್ಪಿ ರಮೇಶ್ ಹರಿಹರ ಅವರುಗಳು 20ರಂದು ಭೇಟಿ ಕೊಟ್ಟಿದ್ದರು. ಕೊಪ್ಪದ ಹೊಸ ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸುತ್ತಿದ್ದಾರೆ.

ವಿದ್ಯುತ್ ಇಲಾಖೆ ಬೇಜವಾಬ್ದಾರಿಗೆ ವಿದ್ಯಾರ್ಥಿನಿ ಬಲಿ ?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಶಾಲೆಗೆ ಬರುತ್ತಿದ್ದ ಪುಟ್ಟ ಬಾಲಕಿಯೊಬ್ಬಳು ಮಳೆಯಿಂದಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಇಲ್ಲಿಗೆ ಸಮೀಪದ ಹೊನ್ನವಳ್ಳಿಯಲ್ಲಿ ನಡೆದಿದೆ.

ಹೊನ್ನವಳ್ಳಿ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿನಿ ವಿಜಯಲಕ್ಷ್ಮಿ ಎಂಬ 10 ವರ್ಷದ ಬಾಲಕಿಯೇ ಈ ದುರ್ಘಟನೆಗೆ ಬಲಿಯಾದವಳು.

ಈ ವಿದ್ಯುತ್ ಲೈನು ಬಹಳ ಹಳೆಯದಾಗಿದ್ದುದಲ್ಲದೆ ಕಂಬದಿಂದ ಕಂಬಕ್ಕೆ ಇರುವ ಮಾಮೂಲಿ 180–200 ಅಡಿಗಿಂತಲೂ ಸುಮಾರು 100 ಅಡಿಗಳಷ್ಟು ಹೆಚ್ಚು ಇದ್ದು, ಈ ಅಪಾಯದ ಬಗ್ಗೆ ಸ್ಥಳೀಯರು ಮುಂಚೆಯೇ ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿದ್ದರೆನ್ನಲಾಗಿದೆ. ಲೈನು ನೆಲಕ್ಕುರುಳಿದ ದಿನವೂ ಬೆಳಗ್ಗೆ 9 ಗಂಟೆಗೇ ಫೋನ್ ಮೂಲಕ ಇಲಾಖೆಗೆ ತಿಳಿಸಿದ್ದರೂ ಕೂಡಲೇ ವಿದ್ಯುತ್ ನಿಲ್ಲಿಸದಿದ್ದುದೇ ಈ ದುರ್ಘಟನೆಗೆ ಕಾರಣವೆನ್ನಲಾಗಿದೆ.

ಶೃಂಗೇರಿ ಕೆ. ವಿ. ಮಂ. ಅಧಿಕಾರಿ ಹೇಳಿಕೆ

ಸುಮಾರು 9–9.30ರ ಹೊತ್ತಿಗೆ ಫೋನ್ ಬಂದಿದ್ದು, ಇಬ್ಬರು ಲೈನ್ ಮನ್‌ಗಳನ್ನು ವಿದ್ಯುತ್ ನಿಲ್ಲಿಸಲು ಕಳಿಸಲಾಗಿತ್ತು. ಆ ಲೈನು ಕೊಪ್ಪದ ಕಡೆಯಿಂದ ಸರಬರಾಜು ಆಗುವ ಲೈನು ಆಗಿದ್ದು, ಅದು ಹರಿಹರಪುರ ಅಡ್ಡಗದ್ದೆಯಲ್ಲಿ ಇದ್ದ ಕಾರಣ ಕೂಡಲೇ ನಿಲ್ಲಿಸಲಾಗಲಿಲ್ಲ. ಅಷ್ಟರಲ್ಲಿ ದುರ್ಘಟನೆ ನಡೆದು ಹೋಗಿರಬೇಕು. ಹಾಗೆಯೇ ಅಲ್ಲಿ ಕಂಬದಿಂದ ಕಂಬಕ್ಕೆ ದೂರ ಜಾಸ್ತಿ ಇರುವುದಕ್ಕೆ ಕೆಳಗೆ ತುಂಬಾ ತಗ್ಗು ಪ್ರದೇಶ ಇರುವುದು ಕಾರಣವಾಗಿದೆ ಎಂದು ಶೃಂಗೇರಿಯ ಕ. ವಿ. ಮಂ. ಅಧಿಕಾರಿ ತಿಳಿಸಿದ್ದಾರೆ. (4ನೇ ಪುಟಕ್ಕೆ)

ಹಸಿರಿನ ಹೆಸರು ಮಾಡಿದ ಅರಣ್ಯಾಧಿಕಾರಿಗೆ ಎತ್ತಂಗಡಿ ಎಷ್ಟು ಸಮಂಜಸ ?

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸರ್ಕಾರಿ ಅಧಿಕಾರಿಗಳೆಂದರೆ ವರ್ಗಾವಣೆ ಮಾಮೂಲು. ಅದು ಅಗತ್ಯವೂ ಹೌದು. ಆದರೆ ಉತ್ಸಾಹಿ, ಕಾರ್ಯಶೀಲನಾಗಿದ್ದು, ಅಕ್ರಮ–ಅವ್ಯವಹಾರಗಳನ್ನು ಮೆಟ್ಟಿ ನಿಲ್ಲಿಸಿ ಮೇಲಧಿಕಾರಿಗಳಿಂದಲೂ ಜನತೆಯಿಂದಲೂ ಮೆಚ್ಚುಗೆಯನ್ನೂ, ಕುಪ್ರಸಿದ್ಧ ವ್ಯಕ್ತಿಗಳ ದ್ವೇಷವನ್ನೂ ಗಳಿಸಿದ್ದ ಅಧಿಕಾರಿಯೊಬ್ಬನನ್ನು ಕೇವಲ 2 ವರ್ಷದೊಳಗೆ ಒಂದು ಕಡೆಯಿಂದ ವರ್ಗಾಯಿಸಿದರೆ, ಇದು ಯಾರೋ ರಾಜಕೀಯದವರ ಅಥವಾ ಪ್ರಭಾವಿಗಳ ಬೇಳೆ ಬೇಯಿಸಲು ಆದ ಏರ್ಪಾಡು ಎಂಬುದನ್ನು ಒಂದು ಚಿಕ್ಕ ಮಗುವೂ ಹೇಳುತ್ತದೆ.

ಶೃಂಗೇರಿಯ ವಲಯ ಅರಣ್ಯಾಧಿಕಾರಿಯಾಗಿದ್ದ ಲಕ್ಷ್ಮೀನಾರಾಯಣ ಅವರ ವರ್ಗಾವಣೆ ಇದೇ ಜಾತಿಗೆ ಸೇರುತ್ತದೆಂಬುದು, ಶೃಂಗೇರಿ ವಲಯದ ವ್ಯಾಪ್ತಿಯ ಪ್ರತಿಯೊಬ್ಬ ಪ್ರಜ್ಞಾವಂತನ (ಮತ್ತು ಕಾಡುಕಳ್ಳನಲ್ಲದವನ) ಸ್ಪಷ್ಟ ಅಭಿಪ್ರಾಯವಾಗಿದೆ

ಸಂಬಂಧದ ಕೊಡುಗೆ?

ನಮ್ಮ ಕ್ಷೇತ್ರದ ಶ್ರೀಮಂತ ಪ್ಲಾಂಟರ್‌ರೊಬ್ಬರು ಈಚೆಗೆ ರಾಜ್ಯ ಜನತಾ ಅಧ್ಯಕ್ಷರೊಡನೆ ಬೆಳೆಸಿದ ಸಂಬಂಧದ ಕೊಡುಗೆ ಈ ವರ್ಗಾವಣೆ ಎಂಬ ಮಾತು ಇಲ್ಲಿ ದಟ್ಟವಾಗಿ ಹಬ್ಬಿದೆ.

'ಅಂತೂ, ಎರಡು ವರ್ಷಗಳ ಹಿಂದೆ 'ಮಾಫಿ ಪಾಸ್' ಮಾಡಿ ಅರಣ್ಯ ಕೊಳ್ಳೆ ಹೊಡೆದು ಈಗೆರಡು ವರ್ಷಗಳಿಂದ ಬಾಲ ಮುದುರಿಕೊಂಡು ಬೇರೆ ಬೇರೆ ಉದ್ಯೋಗ ಹಿಡಿದಿದ್ದ ಎಲ್ಲಾ ಅಪ್ರಾಮಾಣಿಕ ಅರಣ್ಯ ಕಂಟ್ರಾಕ್ಟರುಗಳೂ ಈ ಅರಣ್ಯಾಧಿಕಾರಿ ಇಲ್ಲಿಂದ ಜಾಗ ಖಾಲಿ ಮಾಡುವುದನ್ನೇ ಕಾದು ಚೊಟ್ಟೆಯೊಡೆದು ಹೊರ ಬರುವ ಮೊಸಳೆ ಮರಿಗಳಂತೆ ಕಣ್ಣು ಬಾಯಿ ತೆರೆದುಕೊಂಡಿದ್ದಾರೆ

ಎರಡು ವರ್ಷಗಳ ಹಿಂದೆ

ಎರಡು ವರ್ಷಗಳಹಿಂದೆ ಒಬ್ಬ ಅದಕ್ಷ, ಅಪ್ರಾಮಾಣಿಕ ರೇಂಜರಿಂದ ಇಲ್ಲಿ ಸಾಕಷ್ಟು ಹಾನಿಯಾಗಿತ್ತು. ಇಂದು ಈ ರೇಂಜರನ್ನು ದೂಡುತ್ತಿರುವವರೇ ಅಂದು ಆ ಅಧಿಕಾರಿಯನ್ನು–ಆತನಿಗೆ ಆಗಲೇ ಇಲ್ಲಿ 5 ವರ್ಷ ಆಗಿದ್ದರೂ ಸಹ–ಇನ್ನೂ ಹೆಚ್ಚು ಕಾಲ ಇಲ್ಲೇ ಉಳಿಸಿಕೊಳ್ಳಲು ಅಂದು ಶಾಸಕರಾಗಿದ್ದ ಗೋವಿಂದ ಗೌಡರಿಗೆ ದುಂಬಾಲು ಬಿದ್ದು, ಕೊನೆಗೂ ಅವರಿಗೆ ವರ್ಗವಾದಾಗ 'ಸಂಪದ್ಭರಿತ' ಜಾಗಕ್ಕೆ ಹಾಕಿಸಿ ಕೊಡುವಲ್ಲಿ ಯಶಸ್ವಿಯಾದುದನ್ನು ಯಾರೂ ಮರೆತಂತಿಲ್ಲ

ಆ ಅಧಿಕಾರಿಯ ಅವಧಿಯಲ್ಲಿ ಇಲಾಖೆ ಪೂರ್ಣ ಕುಲಗೆಟ್ಟಿತ್ತು. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಸುಮಾರು 15 ಸಾವಿರ ಮರಗಳು ಜೀವ ಕಳೆದುಕೊಂಡು ಶ್ರೀಮಂತರ ಪಾಲಾಗಿವೆಯೆನ್ನಲಾಗಿದೆ. ಅಂದಿನ ಆಡಳಿತದ ಪಕ್ಷವಾದ ಕಾಂಗ್ರೆಸ್ಸಿಗೆ ತನ್ನ ಜಾತಿಯವರ ಜನಿವಾರ ಹಿಡಿದು ಓಟು ಹಾಕಿಸುವ ಮಟ್ಟಕ್ಕೆ ಸಕ್ರಿಯ ರಾಜಕೀಯ ಮಾಡಿದಂತಹ ವ್ಯಕ್ತಿ ಆತ.

ಕಾರ್ಯದಕ್ಷತೆಗೆ ಸಾಕ್ಷಿ

ಅಂಥ ಅಪ್ರಾಮಾಣಿಕತೆ, ಅದಕ್ಷತೆಗಳ ಒಂದಂಶವನ್ನಾದರೂ ಈ ರೇಂಜರಲ್ಲಿ ಕಾಣಲು ಸಾಧ್ಯವಿಲ್ಲವೆನ್ನುವುದಕ್ಕೆ ಅವರ ಕಾಲದಲ್ಲಿ ಶೃಂಗೇರಿ ವಲಯದಲ್ಲಿ ನೆಟ್ಟು ಬೆಳೆಸಿದ ಪ್ಲಾಂಟೇಶನ್‌ಗಳೇ ಸಾಕ್ಷಿ ಸಾಕು. ಯಾರದೇ ಯಾವುದೇ ಮುಲಾಜಿಲ್ಲದೆ ಅಕ್ರಮ ನಾಟಾ ಕಡಿತದ ಪ್ರತಿಯೊಂದು ಘಟನೆಯನ್ನೂ ಬೆಂಬತ್ತಿ ಕೇಸು, ಜುಲ್ಮಾನೆ ಹಾಕಿ, ನಾಟಾದ ಕಳ್ಳಸಾಗಾಣಿಕೆಯನ್ನು ಈ ವಲಯದಲ್ಲಿ ಹೆಚ್ಚು–ಕಡಿಮೆ ಸಂಪೂರ್ಣವಾಗಿ ನಿಲ್ಲಿಸಿದ್ದರೆಂದರೆ ಉತ್ಪ್ರೇಕ್ಷೆಯಲ್ಲ.

ಅಲ್ಲದೆ, ತೀವ್ರ ಬರಗಾಲದ ಸಮಯದಲ್ಲಿ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ ವಿನಯ್ ಲೂಥ್ರರವರ ನೇತೃತ್ವದಲ್ಲಿ ಊರಿನ, ತಾಲ್ಲೂಕಿನ ಎಲ್ಲಾ ವರ್ಗದ ಜನರನ್ನೂ ಸಂಘಟಿಸಿ, 100 ಲೋಡಿಗೂ ಹೆಚ್ಚು ಹುಲ್ಲನ್ನು ಸಂಗ್ರಹಿಸಿ ರವಾನಿಸುವಲ್ಲಿ ಇವರು ನಿರ್ವಹಿಸಿದ ಪಾತ್ರವನ್ನು ರಾಜ್ಯ ಮಟ್ಟದ ಪತ್ರಿಕೆಗಳೂ ಪ್ರಶಂಸಿಸಿವೆ.

ಇನ್ನೊಬ್ಬ ದಕ್ಷ ಸಿಗುವುದಿಲ್ಲವೆ?

ಕಾಡಿನ ಬಗ್ಗೆ ಅತ್ಯಂತ ಪ್ರೀತಿ ಇರುವ ಮಂತ್ರಿ ಗೋವಿಂದ ಗೌಡರು ಇವರ ದಕ್ಷತೆಯ ಅವಶ್ಯಕತೆ ಚಿಕ್ಕಗ್ರಹಾರ ವಲಯಕ್ಕೆ ಅತೀ ಅಗತ್ಯವಾಗಿದೆ ಎಂದು ಹೇಳಿದ ವದಂತಿ ಇದೆ. ಆದರೆ ಇದು ಎಷ್ಟು ಸಮಂಜಸ ಎಂಬುದನ್ನು ಅವರು ಇನ್ನೊಮ್ಮೆ ಯೋಚಿಸುವುದೊಳಿತು, ಏಕೆಂದರೆ, ಇವರನ್ನು ಇಲ್ಲಿಯೇ

(ನಾಲ್ಕನೇ ಪುಟಕ್ಕೆ)

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್ ಎನ್ ಎಸ್ - 19

4ನೇ ವರ್ಷ 4 [illegible] ಸಂಚಿಕೆ ಕೊಪ್ಪ 22-6-1986 ಭಾನ[illegible] 40 ಪೈಸೆ

[illegible] ಕಾ[illegible]

ಜ[illegible] ನಡೆದ ಹೊ[illegible] ಕೊಲೆ ಯಾದ [illegible] 19ರ [illegible]

ವ[illegible] ರಮೇ ಟಲಿನ [illegible] ಪಿಸಿ, ಟಿ. ಅ[illegible] ದಾಗ ಖಾದ[illegible] ರಿಗೆ ಮಣಿ[illegible] ಬಗ್ಗೆ [illegible] ಅವರು [illegible] ಕ್ಕರಿಕೆ

ಕೊಲೆ[illegible] ರಮೇಶ್ [illegible] ನೆರವು [illegible] ತಲೆ [illegible] ಗಡಿಗ [illegible] ನನ್ನು [illegible] ಎಂದೂ,

ಗಾ[illegible] ಚಿಜೆ[illegible] 19[illegible] ಹಲ್ಲೆಗೆ ಮನೆ[illegible]

ಹಿನ್ನೆಲೆ

ಫೆ[illegible] 2 [illegible] ಕಟ್ಟಿನ[illegible] ಒಬ್ಬ ಭಿಕ್ಷ[illegible] ಕಾಫಿ–ತಿಂ[illegible] ಎರಡೂ ವರೆ ರೂ. ಬಿಲ್ [illegible] ಅಲ್ಲೇ ಟೀ ಕುಡಿಯುತ್ತಿ[illegible] ಕಡೆಯು ಇಬ್ಬರು ಯುವಕರು ಆತನನ್ನು ಬಿಲ್ ಕೊಟ್ಟು ಹೋಗುವಂತೆ ಬಲಾತ್ಕರಿಸಿದರೆಂ

ಆದ[illegible] ಲೋನಿಯ ಸಿನಿ[illegible] ಕೃಷ್ಣ ಕಾಲೊನಿಯಿಂದ 25–30 ಜನರ ಗುಂಪು ಕಟ್ಟಿಕೊಂಡು ಒಂದ[illegible] ರಾತ್ರಿ ಜಯಪುರದಲ್ಲಿ ಖಾದರ್‌ನಿಗಾಗಿ ಹುಡುಕಾಡಿ, ಅಹಮದರ ಮಗ ಅಬೂಬಕರ್‌ಗೆ ಹೊಡೆಯಲು ಸಿನಿಮಾ ಟಾಕೀಸಿನ ಬಳಿ ಹೊಂಚು ಹಾಕಿದ್ದರೆಂದೂ,

ವಿದ್ಯುತ್ ಇಲಾಖೆ ಬೇಜವಾಬ್ದಾರಿಗೆ ವಿದ್ಯಾರ್ಥಿನಿ ಬಲಿ ?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಶಾಲೆಗೆ ಬರುತ್ತಿದ್ದ ಪುಟ್ಟ ಬಾಲಕಿಯೊಬ್ಬಳು ಮಳೆಯಿಂದಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಇಲ್ಲಿಗೆ ಸಮೀಪದ ಹೊನ್ನವಳ್ಳಿಯಲ್ಲಿ ನಡೆದಿದೆ.

ಹೊನ್ನವಳ್ಳಿ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿನಿ ವಿಜಯಲಕ್ಷ್ಮಿ ಎಂಬ 10 ವರ್ಷದ ಬಾಲಕಿಯೇ ಈ ದುರ್ಘಟನೆಗೆ ಬಲಿಯಾದವಳು.

ಈ ವಿದ್ಯುತ್ ಲೈನು ಬಹಳ ಹಳೆಯದಾಗಿದ್ದುದಲ್ಲದೆ ಕಂಬದಿಂದ ಕಂಬಕ್ಕೆ ಇರುವ ಮಾಮೂಲಿ 180–200 ಅಡಿಗಿಂತಲೂ ಸುಮಾರು 100 ಅಡಿಗಳಷ್ಟು ಹೆಚ್ಚು ಇದ್ದು, ಈ ಅಪಾಯದ ಬಗ್ಗೆ ಸ್ಥಳೀಯರು ಮುಂಚೆಯೇ ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿದ್ದರೆನ್ನಲಾಗಿದೆ. ಲೈನು ನೆಲಕ್ಕುರುಳಿದ ದಿನವೂ ಬೆಳಗ್ಗೆ 9 ಗಂಟೆಗೇ ಫೋನ್ ಮೂಲಕ ಇಲಾಖೆಗೆ ತಿಳಿಸಿದ್ದರೂ ಕೂಡಲೇ ವಿದ್ಯುತ್ ನಿಲ್ಲಿಸದಿದ್ದುದೇ ಈ ದುರ್ಘಟನೆಗೆ ಕಾರಣವೆನ್ನಲಾಗಿದೆ.

ಶೃಂಗೇರಿ ಕ. ವಿ. ಮಂ. ಅಧಿಕಾರಿ ಹೇಳಿಕೆ

ಸುಮಾರು 9–9.30ರ ಹೊತ್ತಿಗೆ ಫೋನ್ ಬಂದಿದ್ದು, ಇಬ್ಬರು ಲೈನ್ ಮನ್‌ಗಳನ್ನು ವಿದ್ಯುತ್ ನಿಲ್ಲಿಸಲು ಕಳಿಸಲಾಗಿತ್ತು. ಆ ಲೈನು ಕೊಪ್ಪದ ಕಡೆಯಿಂದ ಸರಬರಾಜು ಆಗುವ ಲೈನು ಆಗಿದ್ದು, ಅದು ಹರಿಹರಪುರ ಅಡ್ಡಗದ್ದೆಯಲ್ಲಿ ಇದ್ದ ಕಾರಣ ಕೂಡಲೇ ನಿಲ್ಲಿಸಲಾಗಲಿಲ್ಲ. ಅಷ್ಟರಲ್ಲಿ ದುರ್ಘಟನೆ ನಡೆದು ಹೋಗಿರಬೇಕು. ಹಾಗೆಯೇ ಅಲ್ಲಿ ಕಂಬದಿಂದ ಕಂಬಕ್ಕೆ ದೂರ ಜಾಸ್ತಿ ಇರುವುದಕ್ಕೆ ಕೆಳಗೆ ತುಂಬಾ ತಗ್ಗು ಪ್ರದೇಶ ಇರುವುದು ಕಾರಣವಾಗಿದೆ ಎಂದು ಶೃಂಗೇರಿಯ ಕ. ವಿ. ಮಂ. ಅಧಿಕಾರಿ ತಿಳಿಸಿದ್ದಾರೆ. (4ನೇ ಪುಟಕ್ಕೆ)

ಇದರ ಸುಳಿವು ದೊರೆತು ಆತ ಹಿಂದಿನಿಂದ ತಪ್ಪಿಸಿಕೊಂಡು ಹೋಗಿ ತಂದೆಗೆ ತಿಳಿಸಿದಾಗ ಅವರು ರಾಜಿ ಮಾಡಿಸುವ ಉದ್ದೇಶದಿಂದ ಅಳಿಯನೊಂದಿಗೆ ಟಾಕೀಸಿಗೆ ಬಂದಾಗ ಗುಂಪು ಖಾದರ್ ಮೇಲೆ ಹಲ್ಲೆ ನಡೆಸಿತೆಂದೂ ತಿಳಿದುಬಂದಿದೆ. ರಮೇಶ ಚೂರಿಯಿಂದ ಆತನ ಬೆನ್ನಿಗೂ, ತಪ್ಪಿಸಲು ಹೋದ ಅಹಮದರಿಗೆ ಹೊಟ್ಟೆಗೂ ಇರಿದನೆಂದು ಹೇಳಲಾಗಿದೆ.

ಕೂಡಲೇ ರಕ್ತದ ಮಡುವಿನಲ್ಲಿ ಬಿದ್ದ ಅವರಿಬ್ಬರನ್ನು ಡಾ|| ಯೋಗಪ್ಪನವರ ಸಲಹೆಯಂತೆ ಕೊಪ್ಪ ಆಸ್ಪತ್ರೆಗೆ ಒಯ್ದು ಸ್ವಲ್ಪ ಹೊತ್ತಿನಲ್ಲಿ ಅಹಮದ್ ಅಸುನೀಗಿದರೆಂದೂ ತೀವ್ರ ಸ್ಥಿತಿಯಲ್ಲಿದ್ದ ಖಾದರ್‌ರನ್ನು ಕೂಡಲೇ ಮಣಿಪಾಲಕ್ಕೆ ಒಯ್ಯಲಾಯಿತೆಂದೂ ಗೊತ್ತಾಗಿದೆ.

ಊರವರ ಸಂತಾಪ

3 ತಿಂಗಳ ಒಂದು ಮಗುವೂ ಸೇರಿದಂತೆ ಹತ್ತು ಮಕ್ಕಳ ತಂದೆಯಾದ ಅಹಮದ್ ಅಷ್ಟೇನೂ ಅನುಕೂಲಸ್ಥರಲ್ಲದಿದ್ದರೂ ಯಾರೊಂದಿಗೂ ವಿರೋಧವಿಲ್ಲದೆ ಎಲ್ಲರಿಗೂ ಉಪಕಾರಿಯಾಗಿದ್ದರೆನ್ನುವ ಇಡೀ ಊರ ಜನ ಅವರ ನಿಧನದ ಬಗ್ಗೆ ಬಹಳ ಸಂತಾಪ ಪಡುತ್ತಿದ್ದಾರೆ. ಅವರ ಗೌರವಾರ್ಥ ಒಂದು ದಿನ ಊರಿನಲ್ಲಿ ಬಹುತೇಕ ಅಂಗಡಿ–ಮುಂಗಟ್ಟುಗಳು ಮುಚ್ಚಿದ್ದವು.

ಹೆಚ್ಚಿನ ಗಲಭೆಗೆ ಅವಕಾಶವಾಗದಂತೆ ಪೋಲೀಸರು ಪೂರ್ಣ ಮುಂಜಾಗ್ರತೆ ವಹಿಸಿದ್ದು, ಎಸ್ಪಿ ಸುಸಂತ್ ಮಹಾಪಾತ್ರ, ಡಿವೈ ಎಸ್ಪಿ ರಮೇಶ್ ಹರಿಹರ ಅವರುಗಳು 20ರಂದು ಭೇಟಿ ಕೊಟ್ಟಿದ್ದರು. ಕೊಪ್ಪದ ಹೊಸ ಸರ್ಕಲ್ ಇನ್ಸ್‌ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸುತ್ತಿದ್ದಾರೆ.

ಹಸಿರಿನ ಹೆಸರು ಮಾಡಿದ ಅರಣ್ಯಾಧಿಕಾರಿಗೆ ಎತ್ತಂಗಡಿ ಎಷ್ಟು ಸಮಂಜಸ ?

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸರ್ಕಾರಿ ಅಧಿಕಾರಿಗಳೆಂದರೆ ವರ್ಗಾವಣೆ ಮಾಮೂಲು. ಅದು ಅಗತ್ಯವೂ ಹೌದು. ಆದರೆ ಉತ್ಸಾಹಿ, ಕಾರ್ಯಶೀಲನಾಗಿದ್ದು, ಅಕ್ರಮ–ಅವ್ಯವಹಾರಗಳನ್ನು ಮೆಟ್ಟಿ ನಿಲ್ಲಿಸಿ ಮೇಲಧಿಕಾರಿಗಳಿಂದಲೂ ಜನತೆಯಿಂದಲೂ ಮೆಚ್ಚುಗೆಯನ್ನೂ, ಕುಪ್ರಸಿದ್ಧ ವ್ಯಕ್ತಿಗಳ ದ್ವೇಷವನ್ನೂ ಗಳಿಸಿದ್ದ ಅಧಿಕಾರಿಯೊಬ್ಬನನ್ನು ಕೇವಲ 2 ವರ್ಷದೊಳಗೆ ಒಂದು ಕಡೆಯಿಂದ ವರ್ಗಾಯಿಸಿದರೆ, ಇದು ಯಾರೋ ರಾಜಕೀಯದವರ ಅಥವಾ ಪ್ರಭಾವಿಗಳ ಬೇಳೆ ಬೇಯಿಸಲು ಆದ ಏರ್ಪಾಡು ಎಂಬುದನ್ನು ಒಂದು ಚಿಕ್ಕ ಮಗುವೂ ಹೇಳುತ್ತದೆ.

ಶೃಂಗೇರಿಯ ವಲಯ ಅರಣ್ಯಾಧಿಕಾರಿಯಾಗಿದ್ದ ಲಕ್ಷ್ಮೀನಾರಾಯಣ ಅವರ ವರ್ಗಾವಣೆ ಇದೇ ಜಾತಿಗೆ ಸೇರುತ್ತದೆಂಬುದು ಶೃಂಗೇರಿ ವಲಯದ ವ್ಯಾಪ್ತಿಯ ಪ್ರತಿಯೊಬ್ಬ ಪ್ರಜ್ಞಾವಂತನ (ಮತ್ತು ಕಾಡುಕಳ್ಳನಲ್ಲದವನ) ಸ್ಪಷ್ಟ ಅಭಿಪ್ರಾಯವಾಗಿದೆ.

ಸಂಬಂಧದ ಕೊಡುಗೆ?

ನಮ್ಮ ಕ್ಷೇತ್ರದ ಶ್ರೀಮಂತ ಪ್ಲಾಂಟರ್‌ರೊಬ್ಬರು ಈಚೆಗೆ ರಾಜ್ಯ ಜನತಾ ಅಧ್ಯಕ್ಷರೊಡನೆ ಬೆಳೆಸಿದ ಸಂಬಂಧದ ಕೊಡುಗೆ ಈ ವರ್ಗಾವಣೆ ಎಂಬ ಮಾತು ಇಲ್ಲಿ ದಟ್ಟವಾಗಿ ಹಬ್ಬಿದೆ.

ಅಂತೂ, ಎರಡು ವರ್ಷಗಳ ಹಿಂದೆ 'ಮಾಫಿ ಪಾಸ್' ಮಾಡಿ ಅರಣ್ಯ ಕೊಳ್ಳೆ ಹೊಡೆದು ಈಗೆರಡು ವರ್ಷಗಳಿಂದ ಬಾಲ ಮುದುರಿಕೊಂಡು ಬೇರೆ ಬೇರೆ ಉದ್ಯೋಗ ಹಿಡಿದಿದ್ದ ಎಲ್ಲಾ ಅಪ್ರಾಮಾಣಿಕ ಅರಣ್ಯ ಕಂಟ್ರಾಕ್ಟರುಗಳೂ ಈ ಅರಣ್ಯಾಧಿಕಾರಿ ಇಲ್ಲಿಂದ ಜಾಗ ಖಾಲಿ ಮಾಡುವುದನ್ನೇ ಕಾದು ಮೊಟ್ಟೆಯೊಡೆದು ಹೊರ ಬರುವ ಮೊಸಳೆ ಮರಿಗಳಂತೆ ಕಣ್ಣು ಬಾಯಿ ತೆರೆದುಕೊಂಡಿದ್ದಾರೆ.

ಎರಡು ವರ್ಷಗಳ ಹಿಂದೆ

ಎರಡು ವರ್ಷಗಳಹಿಂದೆ ಒಬ್ಬ ಅದಕ್ಷ, ಅಪ್ರಾಮಾಣಿಕ ರೇಂಜರಿಂದ ಇಲ್ಲಿ ಸಾಕಷ್ಟು ಹಾನಿಯಾಗಿತ್ತು. ಇಂದು ಈ ರೇಂಜರನ್ನು ದೂರುತ್ತಿರುವವರೇ ಅಂದು ಆ ಅಧಿಕಾರಿಯನ್ನು–ಆತನಿಗೆ ಆಗಲೇ ಇಲ್ಲಿ 5 ವರ್ಷ ಆಗಿದ್ದರೂ ಸಹ–ಇನ್ನೂ ಹೆಚ್ಚು ಕಾಲ ಇಲ್ಲೇ ಉಳಿಸಿಕೊಳ್ಳಲು ಅಂದು ಶಾಸಕರಾಗಿದ್ದ ಗೋವಿಂದ 'ಗೌಡರಿಗೆ ದುಂಬಾಲು ಬಿದ್ದು. ಕೊನೆಗೂ ಅವರಿಗೆ ವರ್ಗವಾದಾಗ 'ಸಂಪದ್ಭರಿತ' ಜಾಗೆಕ್ಕೆ ಹಾಕಿಸಿ ಕೊಡುವಲ್ಲಿ ಯಶಸ್ವಿಯಾದುದನ್ನು ಯಾರೂ ಮರೆತಂತಿಲ್ಲ.

ಆ ಅಧಿಕಾರಿಯ ಅವಧಿಯಲ್ಲಿ ಇಲಾಖೆ ಪೂರ್ಣ ಕುಲಗೆಟ್ಟಿತ್ತು. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಸುಮಾರು 15 ಸಾವಿರ ಮರಗಳು ಜೀವ ಕಳೆದುಕೊಂಡು ಶ್ರೀಮಂತರ ಪಾಲಾಗಿವೆಯೆನ್ನಲಾಗಿದೆ. ಅಂದಿನ ಆಡಳಿತದ ಪಕ್ಷವಾದ ಕಾಂಗ್ರೆಸ್ಸಿಗೆ ತನ್ನ ಜಾತಿಯವರ ಜನಿವಾರ ಹಿಡಿದು ಓಟು ಹಾಕಿಸುವ ಮಟ್ಟಕ್ಕೆ ಸಕ್ರಿಯ ರಾಜಕೀಯ ಮಾಡಿದಂತಹ ವ್ಯಕ್ತಿ ಆತ.

ಕಾರ್ಯದಕ್ಷತೆಗೆ ಸಾಕ್ಷಿ

ಅಂಥ ಅಪ್ರಾಮಾಣಿಕತೆ, ಅದಕ್ಷತೆಗಳ ಒಂದಂಶವನ್ನಾದರೂ ಈ ರೇಂಜರಲ್ಲಿ ಕಾಣಲು ಸಾಧ್ಯವಿಲ್ಲವೆನ್ನುವುದಕ್ಕೆ ಅವರ ಕಾಲದಲ್ಲಿ ಶೃಂಗೇರಿ ವಲಯದಲ್ಲಿ ನೆಟ್ಟು ಬೆಳೆಸಿದ ಪ್ಲಾಂಟೇಶನ್‌ಗಳೇ ಸಾಕ್ಷಿ ಸಾಕು. ಯಾರದೇ ಯಾವುದೇ ಮುಲಾಜಿಲ್ಲದೆ ಅಕ್ರಮ ನಾಟಾ ಕಡಿತದ ಪ್ರತಿಯೊಂದು ಘಟನೆಯನ್ನೂ ಬೆಂಬತ್ತಿ ಕೇಸು, ಚಲ್ಲಾನ್ ಹಾಕಿ, ನಾಟಾದ ಕಳ್ಳ ಸಾಗಾಣಿಕೆಯನ್ನು ಈ ವಲಯದಲ್ಲಿ ಹೆಚ್ಚು–ಕಡಿಮೆ ಸಂಪೂರ್ಣವಾಗಿ ನಿಲ್ಲಿಸಿದ್ದರೆಂದರೆ ಉತ್ಪ್ರೇಕ್ಷೆಯಲ್ಲ.

ಅಲ್ಲದೆ, ತೀವ್ರ ಬರಗಾಲದ ಸಮಯದಲ್ಲಿ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ ವಿನಯ್ ಲೂಥ್ರರವರ ನೇತೃತ್ವದಲ್ಲಿ, ಊರಿನ, ತಾಲ್ಲೂಕಿನ ಎಲ್ಲಾ ವರ್ಗದ ಜನರನ್ನೂ ಸಂಘಟಿಸಿ, 100 ಲೋಡಿಗೂ ಹೆಚ್ಚು ಹುಲ್ಲನ್ನು ಸಂಗ್ರಹಿಸಿ ರವಾನಿಸುವಲ್ಲಿ ಇವರು ನಿರ್ವಹಿಸಿದ ಪಾತ್ರವನ್ನು ರಾಜ್ಯ ಮಟ್ಟದ ಪತ್ರಿಕೆಗಳೂ ಪ್ರಶಂಸಿಸಿವೆ.

ಇನ್ನೊಬ್ಬ ದಕ್ಷ ಸಿಗುವುದಿಲ್ಲವೆ?

ಕಾಡಿನ ಬಗ್ಗೆ ಅತ್ಯಂತ ಪ್ರೀತಿ ಇರುವ ಮಂತ್ರಿ ಗೋವಿಂದ ಗೌಡರು ಇವರ ದಕ್ಷತೆಯ ಅವಶ್ಯಕತೆ ಚಿಕ್ಕಗ್ರಹಾರ ವಲಯಕ್ಕೆ ಅತೀ ಅಗತ್ಯವಾಗಿದೆ ಎಂದು ಹೇಳಿದ ವದಂತಿ ಇದೆ. ಆದರೆ ಇದು ಎಷ್ಟು ಸಮಂಜಸ ಎಂಬುದನ್ನು ಅವರು ಇನ್ನೊಮ್ಮೆ ಯೋಚಿಸುವುದೊಳಿತು. ಏಕೆಂದರೆ, ಇವರನ್ನು ಇಲ್ಲಿಯೇ (ನಾಲ್ಕನೇ ಪುಟಕ್ಕೆ)

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ 41ನೇ ಸಂಚಿಕೆ ಕೊಪ್ಪ 22-6-1986 ಭಾನುವಾರ ಬೆಲೆ 40 ಪೈಸೆ

ಕ್ಷುಲ್ಲಕ ವಿಷಯಕ್ಕೆ ಹ... ತೆದಾಟ:

ಊರಿಗುಪಕಾರಿಯ ಕೊಲೆ

ಜಯಪುರ: ಕ್ಷುಲ್ಲಕ ವಿಷಯವೊಂದಕ್ಕೆ ಕ್ಷುಲ್ಲಕ ವ್ಯಕ್ತಿಗಳ ನಡುವೆ ನಡೆದ ಹೊಡೆದಾಟದಿಂದ 'ಊರಿಗುಪಕಾರಿ'ಯಾಗಿದ್ದ ಸಜ್ಜನ ವ್ಯಕ್ತಿಯೊಬ್ಬರು ಕೊಲೆಯಾದ ದಾರುಣ ಘಟನೆ ಇಲ್ಲಿ ಜೂನ್ 19ರಂದು ನಡೆಯಿತು

ಮೃತ ಪಟ್ಟವರು ಇಲ್ಲಿನ ತಾಜ್ ಹೋಟೆಲಿನ ಮಾಲೀಕ ಮತ್ತು ಕಂಟ್ರಾಕ್ಟರ್ ಟಿ. ಅಹಮದ್ ಎಂಬವರು. ಅವರ ಅಳಿಯ ಖಾದರ್ ಬೆನ್ನಿಗೆ ಆದ ತೀವ್ರ ಇರಿತದಿಂದ ಮಣಿಪಾಲದ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ.

ಆರೋಪಿಗಳು ನಾಪತ್ತೆ

ಕೊಲೆಯ ಪ್ರಮುಖ ಆರೋಪಿಗಳಾದ ರಮೇಶ್ ಮತ್ತು ಕೃಷ್ಣ ಹಾಗೂ ಅವರಿಗೆ ನೆರವು ನೀಡಿದವರೆನ್ನಲಾಗಿರುವ ಹಲವರು ತಲೆ ತಪ್ಪಿಸಿಕೊಂಡಿದ್ದಾರೆನ್ನಲಾಗಿದೆ.

ಗಾರೆ ಕೆಲಸದ ರಮೇಶ್ ಇಲ್ಲಿಯ ಮೋಚಿಯೊಬ್ಬರ ಮಗನಾಗಿದ್ದು, ಕೃಷ್ಣ ಕಟ್ಟೆಮನೆಯ ಮಿಲ್‌ನಲ್ಲಿ ಹಮಾಲಿಯಾಗಿದ್ದನು.

ಹಿನ್ನೆಲೆ

ಘಟನೆಗೆ 2 ದಿನದ ಹಿಂದೆ ಸಮೀಪದ ಕಟ್ಟೆಮನೆಯ ಮುಸ್ಲಿಮರ ಬಡ ಹೋಟೆಲಲ್ಲಿ ಒಬ್ಬ ಭಿಕ್ಷುಕ ಕಾಫಿ-ತಿಂಡಿ ಮುಗಿಸಿ ಎರಡೂವರೆ ರೂ. ಬಿಲ್ ಕೊಡದೆ ಹೊರಟಾಗ ಅಲ್ಲೇ ಚಾ ಕುಡಿಯುತ್ತಿದ್ದ ಖಾದರ್ ಕಡೆಯ ಇಬ್ಬರು ಯುವಕರು ಆತನನ್ನು ಬಿಲ್ ಕೊಟ್ಟು ಹೋಗುವಂತೆ ಬಲಾತ್ಕರಿಸಿದರೆಂದೂ, ಆಗ ಅಲ್ಲಿ ಚಾ ಕುಡಿಯುತ್ತಿದ್ದ ರಮೇಶ್ ಮತ್ತು ಕೃಷ್ಣ ಇದಕ್ಕೆ ಆಕ್ಷೇಪಿಸಿ, ತಾವು ದುಡ್ಡು ಕೊಡುವುದಾಗಿ ಹೇಳಿದಾಗ ಜಗಳವಾಗಿ ಚಪ್ಪಲಿಯಿಂದ ಈ ಇಬ್ಬರಿಗೆ ಹೊಡೆದರೆಂದೂ ಹೇಳಲಾಗಿದೆ. ಈ ಬಗ್ಗೆ ಪೋಲೀಸಿಗೆ ದೂರ ನೀಡಿದ್ದಕ್ಕೆ ಅವರು ರಮೇಶ್, ಕೃಷ್ಣರನ್ನು ಕರೆಸಿ, ಎಚ್ಚರಿಕೆ ನೀಡಿ ಕಳಿಸಿದ್ದರೆನ್ನಲಾಗಿದೆ.

ಮರುದಿನ ಖಾದರ್ ಮತ್ತು ಸಂಗಡಿಗರು ಕಟ್ಟೆಮನೆಗೆ ಹೋಗಿ ರಮೇಶನನ್ನು ಥಳಿಸಿದರೆಂದೂ ಕೃಷ್ಣ ಸಿಕ್ಕಲಿಲ್ಲವೆಂದೂ, ಜೂನ್ 19ರಂದೂ ಸಹ ಪುನಃ ಹಲ್ಲೆಗೆ ಕಾದಿದ್ದರೆಂದೂ ಹೇಳಲಾಗಿದೆ.

ಚೂರಿ ಇರಿತ

ಆದರೆ, ಕಟ್ಟೆಮನೆ ಜನತಾ ಕಾಲೊನಿಯ ನಿವಾಸಿಗಳಾದ ರಮೇಶ ಮತ್ತು ಕೃಷ್ಣ ಕಾಲೊನಿಯಿಂದ 25-30 ಜನರ ಗುಂಪು ಕಟ್ಟಿಕೊಂಡು ಬಂದು ರಾತ್ರಿ ಜಯಪುರದಲ್ಲಿ ಖಾದರ್‌ನಿಗಾಗಿ ಹುಡುಕಾಡಿ, ಅಹಮದರ ಮಗ ಅಬೂಬಕರ್‌ಗೆ ಹೊಡೆಯಲು ಸಿನಿಮಾ ಟಾಕೀಸಿನ ಬಳಿ ಹೊಂಚು ಹಾಕಿದ್ದರೆಂದೂ, ಇದರ ಸುಳಿವು ದೊರೆತು ಆತ ಹಿಂದಿನಿಂದ ತಪ್ಪಿಸಿಕೊಂಡು ಹೋಗಿ ತಂದೆಗೆ ತಿಳಿಸಿದಾಗ ಅವರು ರಾಜಿ ಮಾಡಿಸುವ ಉದ್ದೇಶದಿಂದ ಅಳಿಯನೊಂದಿಗೆ ಟಾಕೀಸಿನ ಬಂದಾಗ ಗುಂಪು ಖಾದರ್ ಮೇಲೆ ಹಲ್ಲೆ ನಡೆಸಿತೆಂದೂ ತಿಳಿದುಬಂದಿದೆ. ರಮೇಶ ಚೂರಿಯಿಂದ ಆತನ ಬೆನ್ನಿಗೂ, ತಪ್ಪಿಸಲು ಹೋದ ಅಹಮದರಿಗೆ ಹೊಟ್ಟೆಗೂ ಇರಿದನೆಂದು ಹೇಳಲಾಗಿದೆ.

ಕೂಡಲೇ ರಕ್ತದ ಮಡುವಿನಲ್ಲಿ ಬಿದ್ದ ಅವರಿಬ್ಬರನ್ನು ಡಾ|| ಯೋಗಪ್ಪನವರ ಸಲಹೆಯಂತೆ ಕೊಪ್ಪ ಆಸ್ಪತ್ರೆಗೆ ಒಯ್ದು ಸ್ವಲ್ಪ ಹೊತ್ತಿನಲ್ಲಿ ಅಹಮದ್ ಅಸುನೀಗಿದರೆಂದೂ ತೀವ್ರ ಸ್ಥಿತಿಯಲ್ಲಿದ್ದ ಖಾದರ್‌ರನ್ನು ಕೂಡಲೇ ಮಣಿಪಾಲಕ್ಕೆ ಒಯ್ಯಲಾಯಿತೆಂದೂ ಗೊತ್ತಾಗಿದೆ.

ಊರವರ ಸಂತಾಪ

3 ತಿಂಗಳ ಒಂದು ಮಗುವೂ ಸೇರಿದಂತೆ ಹತ್ತು ಮಕ್ಕಳ ತಂದೆಯಾದ ಅಹಮದ್ ಅಷ್ಟೇನೂ ಅನುಕೂಲಸ್ಥರಲ್ಲದಿದ್ದರೂ ಯಾರೊಂದಿಗೂ ವಿರೋಧವಿಲ್ಲದೆ ಎಲ್ಲರಿಗೂ ಉಪಕಾರಿಯಾಗಿದ್ದರೆನ್ನುವ ಇಡೀ ಊರ ಜನ ಅವರ ನಿಧನದ ಬಗ್ಗೆ ಬಹಳ ಸಂತಾಪ ಪಡುತ್ತಿದ್ದಾರೆ. ಅವರ ಗೌರವಾರ್ಥ ಒಂದು ದಿನ ಊರಿನಲ್ಲಿ ಬಹುತೇಕ ಅಂಗಡಿ-ಮುಂಗಟ್ಟುಗಳು ಮುಚ್ಚಿದ್ದವು.

ಹೆಚ್ಚಿನ ಗಲಭೆಗೆ ಅವಕಾಶವಾಗದಂತೆ ಪೋಲೀಸರು ಪೂರ್ಣ ಮುಂಜಾಗ್ರತೆ ವಹಿಸಿದ್ದು, ಎಸ್ಪಿ ಸುಸಂತ್ ಮಹಾಪಾತ್ರ, ಡಿವೈ ಎಸ್ಪಿ ರಮೇಶ್ ಹರಿಹರ ಅವರುಗಳು 20ರಂದು ಭೇಟಿ ಕೊಟ್ಟಿದ್ದರು. ಕೊಪ್ಪದ ಹೊಸ ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸುತ್ತಿದ್ದಾರೆ.

ವಿದ್ಯುತ್ ಇಲಾಖೆ ಬೇಜವಾಬ್ದಾರಿಗೆ ವಿದ್ಯಾರ್ಥಿನಿ ಬಲಿ ?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಶಾಲೆಗೆ ಬರುತ್ತಿದ್ದ ಪುಟ್ಟ ಬಾಲಕಿಯೊಬ್ಬಳು ಮಳೆಯಿಂದಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಇಲ್ಲಿಗೆ ಸಮೀಪದ ಹೊನ್ನವಳ್ಳಿಯಲ್ಲಿ ನಡೆದಿದೆ.

ಹೊನ್ನವಳ್ಳಿ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿನಿ ವಿಜಯಲಕ್ಷ್ಮಿ ಎಂಬ 10 ವರ್ಷದ ಬಾಲಕಿಯೇ ಈ ದುರ್ಘಟನೆಗೆ ಬಲಿಯಾದವಳು.

ಈ ವಿದ್ಯುತ್ ಲೈನು ಬಹಳ ಹಳೆಯದಾಗಿದ್ದುದಲ್ಲದೆ ಕಂಬದಿಂದ ಕಂಬಕ್ಕೆ ಇರುವ ಮಾಮೂಲಿ 180-200 ಅಡಿಗಿಂತಲೂ ಸುಮಾರು 100 ಅಡಿಗಳಷ್ಟು ಹೆಚ್ಚು ಇದ್ದು, ಈ ಅಪಾಯದ ಬಗ್ಗೆ ಸ್ಥಳೀಯರು ಮುಂಚೆಯೇ ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿದ್ದರೆನ್ನಲಾಗಿದೆ. ಲೈನು ನೆಲಕ್ಕುರುಳಿದ ದಿನವೂ ಬೆಳಗ್ಗೆ 9 ಗಂಟೆಗೇ ಫೋನ್ ಮೂಲಕ ಇಲಾಖೆಗೆ ತಿಳಿಸಿದ್ದರೂ ಕೂಡಲೇ ವಿದ್ಯುತ್ ನಿಲ್ಲಿಸದಿದ್ದುದೇ ಈ ದುರ್ಘಟನೆಗೆ ಕಾರಣವೆನ್ನಲಾಗಿದೆ

ಶೃಂಗೇರಿ ಕ. ವಿ. ಮಂ. ಅಧಿಕಾರಿ ಹೇಳಿಕೆ

ಸುಮಾರು 9-9.30ರ ಹೊತ್ತಿಗೆ ಫೋನ್ ಬಂದಿದ್ದು, ಇಬ್ಬರು ಲೈನ್ ಮನ್‌ಗಳನ್ನು ವಿದ್ಯುತ್ ನಿಲ್ಲಿಸಲು ಕಳಿಸಲಾಗಿತ್ತು. ಆ ಲೈನು ಕೊಪ್ಪದ ಕಡೆಯಿಂದ ಸರಬರಾಜು ಆಗುವ ಲೈನು ಆಗಿದ್ದು, ಅದು ಹರಿಹರಪುರ ಅಡ್ಡಗದ್ದೆಯಲ್ಲಿ ಇದ್ದ ಕಾರಣ ಕೂಡಲೇ ನಿಲ್ಲಿಸಲಾಗಲಿಲ್ಲ. ಅಷ್ಟರಲ್ಲಿ ದುರ್ಘಟನೆ ನಡೆದು ಹೋಗಿರಬೇಕು. ಹಾಗೆಯೇ ಅಲ್ಲಿ ಕಂಬದಿಂದ ಕಂಬಕ್ಕೆ ದೂರ ಜಾಸ್ತಿ ಇರುವುದಕ್ಕೆ ಕೆಳಗೆ ತುಂಬಾ ತಗ್ಗು ಪ್ರದೇಶ ಇರುವುದು ಕಾರಣವಾಗಿದೆ ಎಂದು ಶೃಂಗೇರಿಯ ಕ. ವಿ. ಮಂ. ಅಧಿಕಾರಿ ತಿಳಿಸಿದ್ದಾರೆ. (4ನೇ ಪುಟಕ್ಕೆ)

ಹಸಿರಿನ ಹೆಸರು ಮಾಡಿದ ಅರಣ್ಯಾಧಿಕಾರಿಗೆ ಎತ್ತಂಗಡಿ ಎಷ್ಟು ಸಮಂಜಸ ?

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸರ್ಕಾರಿ ಅಧಿಕಾರಿಗಳೆಂದರೆ ವರ್ಗಾವಣೆ ಮಾಮೂಲು. ಅದು ಅಗತ್ಯವೂ ಹೌದು. ಆದರೆ ಉತ್ಸಾಹಿ, ಕಾರ್ಯಶೀಲನಾಗಿದ್ದು, ಅಕ್ರಮ-ಅವ್ಯವಹಾರಗಳನ್ನು ಮೆಟ್ಟಿ ನಿಲ್ಲಿಸಿ ಮೇಲಧಿಕಾರಿಗಳಿಂದಲೂ ಜನತೆಯಿಂದಲೂ ಮೆಚ್ಚುಗೆಯನ್ನೂ, ಕುಪ್ರಸಿದ್ಧ ವ್ಯಕ್ತಿಗಳ ದ್ವೇಷವನ್ನೂ ಗಳಿಸಿದ್ದ ಅಧಿಕಾರಿಯೊಬ್ಬನನ್ನು ಕೇವಲ 2 ವರ್ಷದೊಳಗೆ ಒಂದು ಕಡೆಯಿಂದ ವರ್ಗಾಯಿಸಿದರೆ, ಇದು ಯಾರೋ ರಾಜಕೀಯದವರ ಅಥವಾ ಪ್ರಭಾವಿಗಳ ಬೇಳೆ ಬೇಯಿಸಲು ಆದ ಏರ್ಪಾಡು ಎಂಬುದನ್ನು ಒಂದು ಚಿಕ್ಕ ಮಗುವೂ ಹೇಳುತ್ತದೆ.

ಶೃಂಗೇರಿಯ ವಲಯ ಅರಣ್ಯಾಧಿಕಾರಿಯಾಗಿದ್ದ ಲಕ್ಷ್ಮೀನಾರಾಯಣ ಅವರ ವರ್ಗಾವಣೆ ಇದೇ ಜಾತಿಗೆ ಸೇರುತ್ತದೆಂಬುದು ಶೃಂಗೇರಿ ವಲಯದ ವ್ಯಾಪ್ತಿಯ ಪ್ರತಿಯೊಬ್ಬ ಪ್ರಜ್ಞಾವಂತನ (ಮತ್ತು ಕಾಡುಕಳ್ಳನಲ್ಲದವನ) ಸ್ಪಷ್ಟ ಅಭಿಪ್ರಾಯವಾಗಿದೆ

ಸಂಬಂಧದ ಕೊಡುಗೆ?

ನಮ್ಮ ಕ್ಷೇತ್ರದ ಶ್ರೀಮಂತ ಪ್ಲಾಂಟರ್‌ರೊಬ್ಬರು ಈಚೆಗೆ ರಾಜ್ಯ ಜನತಾ ಅಧ್ಯಕ್ಷರೊಡನೆ ಬೆಳೆಸಿದ ಸಂಬಂಧದ ಕೊಡುಗೆ ಈ ವರ್ಗಾವಣೆ ಎಂಬ ಮಾತು ಇಲ್ಲಿ ದಟ್ಟವಾಗಿ ಹಬ್ಬಿದೆ.

ಅಂತೂ, ಎರಡು ವರ್ಷಗಳ ಹಿಂದೆ 'ಮಾಫಿ ಪಾಸ್' ಮಾಡಿ ಅರಣ್ಯ ಕೊಳ್ಳೆ ಹೊಡೆದು ಈಗೆರಡು ವರ್ಷಗಳಿಂದ ಬಾಲ ಮುದುರಿಕೊಂಡು ಬೇರೆ ಬೇರೆ ಉದ್ಯೋಗ ಹಿಡಿದಿದ್ದ ಎಲ್ಲಾ ಅಪ್ರಾಮಾಣಿಕ ಅರಣ್ಯ ಕಂಟ್ರಾಕ್ಟರುಗಳೂ ಈ ಅರಣ್ಯಾಧಿಕಾರಿ ಇಲ್ಲಿಂದ ಜಾಗ ಖಾಲಿ ಮಾಡುವುದನ್ನೇ ಕಾದು ಮೊಟ್ಟೆಯೊಡೆದು ಹೊರ ಬರುವ ಮೊಸಳೆ ಮರಿಗಳಂತೆ ಕಣ್ಣು ಬಾಯಿ ತೆರೆದುಕೊಂಡಿದ್ದಾರೆ

ಎರಡು ವರ್ಷಗಳ ಹಿಂದೆ

ಎರಡು ವರ್ಷಗಳಹಿಂದೆ ಒಬ್ಬ ಅದಕ್ಷ, ಅಪ್ರಾಮಾಣಿಕ ರೇಂಜರಿಂದ ಇಲ್ಲಿ ಸಾಕಷ್ಟು ಹಾನಿಯಾಗಿತ್ತು. ಇಂದು ಈ ರೇಂಜರನ್ನು ದೂರುತ್ತಿರುವವರೇ ಅಂದು ಆ ಅಧಿಕಾರಿಯನ್ನು-ಆತನಿಗೆ ಆಗಲೇ ಇಲ್ಲಿ 5 ವರ್ಷ ಆಗಿದ್ದರೂ ಸಹ-ಇನ್ನೂ ಹೆಚ್ಚು ಕಾಲ ಇಲ್ಲೇ ಉಳಿಸಿಕೊಳ್ಳಲು ಅಂದು ಶಾಸಕರಾಗಿದ್ದ ಗೋವಿಂದ ಗೌಡರಿಗೆ ದುಂಬಾಲು ಬಿದ್ದು. ಕೊನೆಗೂ ಅವರಿಗೆ ವರ್ಗವಾದಾಗ 'ಸಂಪದ್ಭರಿತ' ಜಾಗಕ್ಕೆ ಹಾಕಿಸಿ ಕೊಡುವಲ್ಲಿ ಯಶಸ್ವಿಯಾದುದನ್ನು ಯಾರೂ ಮರೆತಂತಿಲ್ಲ

ಆ ಅಧಿಕಾರಿಯ ಅವಧಿಯಲ್ಲಿ ಇಲಾಖೆ ಪೂರ್ಣ ಕುಲಗೆಟ್ಟಿತ್ತು. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಸುಮಾರು 15 ಸಾವಿರ ಮರಗಳು ಜೀವ ಕಳೆದುಕೊಂಡು ಶ್ರೀಮಂತರ ಪಾಲಾಗಿವೆಯೆನ್ನಲಾಗಿದೆ. ಅಂದಿನ ಆಡಳಿತ ಪಕ್ಷವಾದ ಕಾಂಗ್ರೆಸ್ಸಿಗೆ ತನ್ನ ಜಾತಿಯವರ ಜನಿವಾರ ಹಿಡಿದು ಓಟು ಹಾಕಿಸುವ ಮಟ್ಟಕ್ಕೆ ಸಕ್ರಿಯ ರಾಜಕೀಯ ಮಾಡಿದಂತಹ ವ್ಯಕ್ತಿ ಆತ.

ಕಾರ್ಯದಕ್ಷತೆಗೆ ಸಾಕ್ಷಿ

ಅಂಥ ಅಪ್ರಾಮಾಣಿಕತೆ, ಅದಕ್ಷತೆಗಳ ಒಂದಂಶವನ್ನಾದರೂ ಈ ರೇಂಜರಲ್ಲಿ ಕಾಣಲು ಸಾಧ್ಯವಿಲ್ಲವೆನ್ನುವುದಕ್ಕೆ ಅವರ ಕಾಲದಲ್ಲಿ ಶೃಂಗೇರಿ ವಲಯದಲ್ಲಿ ನೆಟ್ಟು ಬೆಳೆಸಿದ ಪ್ಲಾಂಟೇಶನ್‌ಗಳೇ ಸಾಕ್ಷಿ ಸಾಕು. ಯಾರದೇ ಯಾವುದೇ ಮುಲಾಜಿಲ್ಲದೆ ಅಕ್ರಮ ನಾಟಾ ಕಡಿತದ ಪ್ರತಿಯೊಂದು ಘಟನೆಯನ್ನೂ ಬೆಂಬತ್ತಿ ಕೇಸು, ಜುಲ್ಮಾನೆ ಹಾಕಿ, ನಾಟಾದ ಕಳ್ಳ ಸಾಗಾಣಿಕೆಯನ್ನು ಈ ವಲಯದಲ್ಲಿ ಹೆಚ್ಚು-ಕಡಿಮೆ ಸಂಪೂರ್ಣವಾಗಿ ನಿಲ್ಲಿಸಿದ್ದರೆಂದರೆ ಉತ್ಪ್ರೇಕ್ಷೆಯಲ್ಲ.

ಅಲ್ಲದೆ, ತೀವ್ರ ಬರಗಾಲದ ಸಮಯದಲ್ಲಿ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ ವಿನಯ್ ಲೂಥ್ರರವರ ನೇತೃತ್ವದಲ್ಲಿ, ಊರಿನ, ತಾಲ್ಲೂಕಿನ ಎಲ್ಲಾ ವರ್ಗದ ಜನರನ್ನೂ ಸಂಘಟಿಸಿ, 100 ಲೋಡಿಗೂ ಹೆಚ್ಚು ಹುಲ್ಲನ್ನು ಸಂಗ್ರಹಿಸಿ ರವಾನಿಸುವಲ್ಲಿ ಇವರು ನಿರ್ವಹಿಸಿದ ಪಾತ್ರವನ್ನು ರಾಜ್ಯ ಮಟ್ಟದ ಪತ್ರಿಕೆಗಳೂ ಪ್ರಶಂಸಿಸಿವೆ.

ಇನ್ನೊಬ್ಬ ದಕ್ಷ ಸಿಗುವುದಿಲ್ಲವೆ?

ಕಾಡಿನ ಬಗ್ಗೆ ಅತ್ಯಂತ ಪ್ರೀತಿ ಇರುವ ಮಂತ್ರಿ ಗೋವಿಂದ ಗೌಡರು ಇವರ ದಕ್ಷತೆಯ ಅವಶ್ಯಕತೆ ಚಿಕ್ಕಗ್ರಹಾರ ವಲಯಕ್ಕೆ ಅತೀ ಅಗತ್ಯವಾಗಿದೆ ಎಂದು ಹೇಳಿದ ವದಂತಿ ಇದೆ. ಆದರೆ ಇದು ಎಷ್ಟು ಸಮಂಜಸ ಎಂಬುದನ್ನು ಅವರು ಇನ್ನೊಮ್ಮೆ ಯೋಚಿಸಬೇಕಿತ್ತು, ಏಕೆಂದರೆ, ಇವರನ್ನು ಇಲ್ಲಿಯೇ

(ನಾಲ್ಕನೇ ಪುಟಕ್ಕೆ)

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ 41ನೇ ಸಂಚಿಕೆ ಕೊಪ್ಪ 22-6-1986 ಭಾನುವಾರ ಬೆಲೆ 40 ಪೈಸೆ

ಕ್ಷುಲ್ಲಕ ವಿಷಯಕ್ಕೆ ಹೊಡೆದಾಟ:

ಊರಿಗುಪಕಾರಿಯ ಕೊಲೆ

ಜಯಪುರ: ಕ್ಷುಲ್ಲಕ ವಿಷಯವೊಂದಕ್ಕೆ ಕ್ಷುಲ್ಲಕ ವ್ಯಕ್ತಿಗಳ ನಡುವೆ ನಡೆದ ಹೊಡೆದಾಟದಿಂದ 'ಊರಿಗುಪಕಾರಿ'ಯಾಗಿದ್ದ ಸಜ್ಜನ ವ್ಯಕ್ತಿಯೊಬ್ಬರು ಕೊಲೆಯಾದ ದಾರುಣ ಘಟನೆ ಇಲ್ಲಿ ಜೂನ್ 19ರಂದು ನಡೆಯಿತು.

ಮೃತ ಪಟ್ಟವರು ಇಲ್ಲಿನ ತಾಜ ಹೋಟೆಲಿನ ಮಾಲೀಕ ಮತ್ತು ಕಂಟ್ರಾಕ್ಟರ್ ಟಿ. ಅಹಮದ್ ಎಂಬವರು. [illegible] ಅಳಿಯ ಖಾದರ್ ಬೆನ್ನಿಗೆ ಆದ ತೀವ್ರ ಇರಿತದಿಂದ ಮಣಿಪಾಲದ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ.

ಆರೋಪಿಗಳು ನಾಪತ್ತೆ

ಕೊಲೆಯ ಪ್ರಮುಖ ಆರೋಪಿಗಳಾದ ರಮೇಶ್ ಮತ್ತು ಕೃಷ್ಣ ಹಾಗೂ ಅವರಿಗೆ ನೆರವು ನೀಡಿದವರೆನ್ನಲಾಗಿರುವ ಹಲವರು ತಲೆ ತಪ್ಪಿಸಿಕೊಂಡಿದ್ದಾರೆನ್ನಲಾಗಿದೆ.

ಗಾರೆ ಕೆಲಸದ ರಮೇಶ ಇಲ್ಲಿಯ ಮೋಚಿಯೊಬ್ಬರ ಮಗನಾಗಿದ್ದು ಕೃಷ್ಣ ಕಟ್ಟೆಮನೆಯ ಮಿಲ್‌ನಲ್ಲಿ ಹಮಾಲಿಯಾಗಿದ್ದನು.

ಹಿನ್ನಲೆ

ಘಟನೆಗೆ 2 ದಿನದ ಹಿಂದೆ ಸಮೀಪದ ಕಟ್ಟೆಮನೆಯ ಮುಸ್ಲಿ ಮರ ಬಡ ಹೋಟೆಲಲ್ಲಿ ಒಬ್ಬ ಭಿಕ್ಷುಕ ಕಾಫಿ–ತಿಂಡಿ ಮುಗಿಸಿ ಎರಡೂವರೆ ರೂ. ಬಿಲ್ ಕೊಡದೆ ಹೊರಟಾಗ ಅಲ್ಲೇ ಚಾ ಕುಡಿಯುತ್ತಿದ್ದ ಖಾದರ್ ಕಡೆಯ ಇಬ್ಬರು ಯುವಕರು ಆತನನ್ನು ಬಿಲ್ ಕೊಟ್ಟು ಹೋಗುವಂತೆ ಬಲಾತ್ಕರಿಸಿದರೆಂದೂ, ಆಗ ಅಲ್ಲಿ ಚಾ ಕುಡಿಯುತ್ತಿದ್ದ ರಮೇಶ್ ಮತ್ತು ಕೃಷ್ಣ ಇದಕ್ಕೆ ಆಕ್ಷೇಪಿಸಿ, ತಾವು ದುಡ್ಡು ಕೊಡುವುದಾಗಿ ಹೇಳಿದಾಗ ಜಗಳವಾಗಿ ಚಪ್ಪಲಿಯಿಂದ ಈ ಇಬ್ಬರಿಗೆ ಹೊಡೆದರೆಂದೂ ಹೇಳಲಾಗಿದೆ. ಈ ಬಗ್ಗೆ ಪೋಲೀಸಿಗೆ ದೂರು ನೀಡಿದ್ದಕ್ಕೆ ಅವರು ರಮೇಶ್, ಕೃಷ್ಣರನ್ನು ಕರೆಸಿ, ಎಚ್ಚರಿಕೆ ನೀಡಿ ಕಳಿಸಿದ್ದರೆನ್ನಲಾಗಿದೆ.

ಮರುದಿನ ಖಾದರ್ ಮತ್ತು ಸಂಗಡಿಗರು ಕಟ್ಟೆಮನೆಗೆ ಹೋಗಿ ರಮೇಶನನ್ನು ಥಳಿಸಿದರೆಂದೂ ಕೃಷ್ಣ ಸಿಕ್ಕಲಿಲ್ಲವೆಂದೂ, ಜೂನ್ 19ರಂದೂ ಸಹ ಪುನಃ ಹಲ್ಲೆಗೆ ಕಾದಿದ್ದರೆಂದೂ ಹೇಳಲಾಗಿದೆ

ಚೂರಿ ಇರಿತ

ಆದರೆ, ಕಟ್ಟೆಮನೆ ಜನತಾ ಕಾಲೊನಿಯ ನಿವಾಸಿಗಳಾದ ರಮೇಶ ಮತ್ತು ಕೃಷ್ಣ ಕಾಲೊನಿಯಿಂದ 25–30 ಜನರ ಗುಂಪು ಕಟ್ಟಿಕೊಂಡು ಬಂದು ರಾತ್ರಿ ಜಯಪುರದಲ್ಲಿ ಖಾದರ್‌ನಿಗಾಗಿ ಹುಡುಕಾಡಿ, ಅಹಮದರ ಮಗ ಅಬೂಬಕರ್‌ಗೆ ಹೊಡೆಯಲು ಸಿನಿಮಾ ಟಾಕೀಸಿನ ಬಳಿ ಹೊಂಚು ಹಾಕಿದ್ದರೆಂದೂ, ಇದರ ಸುಳಿವು ದೊರೆತು ಆತ ಹಿಂದಿನಿಂದ ತಪ್ಪಿಸಿಕೊಂಡು ಹೋಗಿ ತಂದೆಗೆ ತಿಳಿಸಿದಾಗ ಅವರು ರಾಜಿ ಮಾಡಿಸುವ ಉದ್ದೇಶದಿಂದ ಅಳಿಯನೊಂದಿಗೆ ಟಾಕೀಸಿಗೆ ಬಂದಾಗ ಗುಂಪು ಖಾದರ್ ಮೇಲೆ ಹಲ್ಲೆ ನಡೆಸಿತೆಂದೂ ತಿಳಿದುಬಂದಿದೆ. ರಮೇಶ ಚೂರಿಯಿಂದ ಆತನ ಬೆನ್ನಿಗೂ, ತಪ್ಪಿಸಲು ಹೋದ ಅಹಮದರಿಗೆ ಹೊಟ್ಟೆಗೂ ಇರಿದನೆಂದು ಹೇಳಲಾಗಿದೆ.

ಕೂಡಲೇ ರಕ್ತದ ಮಡುವಿನಲ್ಲಿ ಬಿದ್ದ ಅವರಿಬ್ಬರನ್ನು ಡಾ|| ಯೋಗಪ್ಪನವರ ಸಲಹೆಯಂತೆ ಕೊಪ್ಪ ಆಸ್ಪತ್ರೆಗೆ ಒಯ್ದು ಸ್ವಲ್ಪ ಹೊತ್ತಿನಲ್ಲಿ ಅಹಮದ್ ಅಸುನೀಗಿದರೆಂದೂ ತೀವ್ರ ಸ್ಥಿತಿಯಲ್ಲಿದ್ದ ಖಾದರ್‌ರನ್ನು ಕೂಡಲೇ ಮಣಿಪಾಲಕ್ಕೆ ಒಯ್ಯಲಾಯಿತೆಂದೂ ಗೊತ್ತಾಗಿದೆ.

ಊರವರ ಸಂತಾಪ

3 ತಿಂಗಳ ಒಂದು ಮಗುವೂ ಸೇರಿದಂತೆ ಹತ್ತು ಮಕ್ಕಳ ತಂದೆಯಾದ ಅಹಮದ್ ಅಷ್ಟೇನೂ ಅನುಕೂಲಸ್ಥರಲ್ಲದಿದ್ದರೂ ಯಾರೊಂದಿಗೂ ವಿರೋಧವಿಲ್ಲದೆ ಎಲ್ಲರಿಗೂ ಉಪಕಾರಿಯಾಗಿದ್ದರೆನ್ನುವ ಇಡೀ ಊರ ಜನ ಅವರ ನಿಧನದ ಬಗ್ಗೆ ಬಹಳ ಸಂತಾಪ ಪಡುತ್ತಿದ್ದಾರೆ. ಅವರ ಗೌರವಾರ್ಥ ಒಂದು ದಿನ ಊರಿನಲ್ಲಿ ಬಹುತೇಕ ಅಂಗಡಿ–ಮುಂಗಟ್ಟುಗಳು ಮುಚ್ಚಿದ್ದವು.

ಹೆಚ್ಚಿನ ಗಲಭೆಗೆ ಅವಕಾಶವಾಗದಂತೆ ಪೋಲೀಸರು ಪೂರ್ಣ ಮುಂಜಾಗ್ರತೆ ವಹಿಸಿದ್ದು, ಎಸ್ಪಿ ಸುಸಂತ್ ಮಹಾಪಾತ್ರ, ಡಿವೈ ಎಸ್ಪಿ ರಮೇಶ್ ಹರಿಹರ ಅವರುಗಳು 20ರಂದು ಭೇಟಿ ಕೊಟ್ಟಿದ್ದರು. ಕೊಪ್ಪದ ಹೊಸ ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸುತ್ತಿದ್ದಾರೆ.

ವಿದ್ಯುತ್ ಇಲಾಖೆ ಬೇಜವಾಬ್ದಾರಿಗೆ ವಿದ್ಯಾರ್ಥಿನಿ ಬಲಿ ?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಶಾಲೆಗೆ ಬರುತ್ತಿದ್ದ ಪುಟ್ಟ ಬಾಲಕಿಯೊಬ್ಬಳು ಮಳೆಯಿಂದಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಇಲ್ಲಿಗೆ ಸಮೀಪದ ಹೊನ್ನವಳ್ಳಿಯಲ್ಲಿ ನಡೆದಿದೆ.

ಹೊನ್ನವಳ್ಳಿ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿನಿ ವಿಜಯಲಕ್ಷ್ಮಿ ಎಂಬ 10 ವರ್ಷದ ಬಾಲಕಿಯೇ ಈ ದುರ್ಘಟನೆಗೆ ಬಲಿಯಾದವಳು.

ಈ ವಿದ್ಯುತ್ ಲೈನು ಬಹಳ ಹಳೆಯದಾಗಿದ್ದುದಲ್ಲದೆ ಕಂಬದಿಂದ ಕಂಬಕ್ಕೆ ಇರುವ ಮಾಮೂಲಿ 180–200 ಅಡಿಗಿಂತಲೂ ಸುಮಾರು 100 ಅಡಿಗಳಷ್ಟು ಹೆಚ್ಚು ಇದ್ದು, ಈ ಅಪಾಯದ ಬಗ್ಗೆ ಸ್ಥಳೀಯರು ಮುಂಚೆಯೇ ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿದ್ದರೆನ್ನಲಾಗಿದೆ. ಲೈನು ನೆಲಕ್ಕುರುಳಿದ ದಿನವೂ ಬೆಳಿಗ್ಗೆ 9 ಗಂಟೆಗೇ ಫೋನ್ ಮೂಲಕ ಇಲಾಖೆಗೆ ತಿಳಿಸಿದ್ದರೂ ಕೂಡಲೇ ವಿದ್ಯುತ್ ನಿಲ್ಲಿಸದಿದ್ದುದೇ ಈ ದುರ್ಘಟನೆಗೆ ಕಾರಣವೆನ್ನಲಾಗಿದೆ

ಶೃಂಗೇರಿ ಕ. ವಿ. ಮಂ. ಅಧಿಕಾರಿ ಹೇಳಿಕೆ

ಸುಮಾರು 9–9.30ರ ಹೊತ್ತಿಗೆ ಫೋನ್ ಬಂದಿದ್ದು, ಇಬ್ಬರು ಲೈನ್ ಮನ್‌ಗಳನ್ನು ವಿದ್ಯುತ್ ನಿಲ್ಲಿಸಲು ಕಳಿಸಲಾಗಿತ್ತು. ಆ ಲೈನು ಕೊಪ್ಪದ ಕಡೆಯಿಂದ ಸರಬರಾಜು ಆಗುವ ಲೈನು ಆಗಿದ್ದು, ಅದು ಹರಿಹರಪುರ ಅಡ್ಡ ಗದ್ದೆಯಲ್ಲಿ ಇದ್ದ ಕಾರಣ ಕೂಡಲೇ ನಿಲ್ಲಿಸಲಾಗಲಿಲ್ಲ. ಅಷ್ಟರಲ್ಲಿ ದುರ್ಘಟನೆ ನಡೆದು ಹೋಗಿರಬೇಕು. ಹಾಗೆಯೇ ಅಲ್ಲಿ ಕಂಬದಿಂದ ಕಂಬಕ್ಕೆ ದೂರ ಜಾಸ್ತಿ ಇರುವುದಕ್ಕೆ ಕೆಳಗೆ ತುಂಬಾ ತಗ್ಗು ಪ್ರದೇಶ ಇರುವುದು ಕಾರಣವಾಗಿದೆ ಎಂದು ಶೃಂಗೇರಿಯ ಕ. ವಿ. ಮಂ. ಅಧಿಕಾರಿ ತಿಳಿಸಿದ್ದಾರೆ. (4ನೇ ಪುಟಕ್ಕೆ)

ಹಸಿರಿನ ಹೆಸರು ಮಾಡಿದ ಅರಣ್ಯಾಧಿಕಾರಿಗೆ ಎತ್ತಂಗಡಿ ಎಷ್ಟು ಸಮಂಜಸ ?

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸರ್ಕಾರಿ ಅಧಿಕಾರಿಗಳೆಂದರೆ ವರ್ಗಾವಣೆ ಮಾಮೂಲು. ಅದು ಅಗತ್ಯವೂ ಹೌದು. ಆದರೆ ಉತ್ಸಾಹಿ, ಕಾರ್ಯಶೀಲನಾಗಿದ್ದು, ಅಕ್ರಮ–ಅವ್ಯವಹಾರಗಳನ್ನು ಮೆಟ್ಟಿ ನಿಲ್ಲಿಸಿ ಮೇಲಧಿಕಾರಿಗಳಿಂದಲೂ ಜನತೆಯಿಂದಲೂ ಮೆಚ್ಚುಗೆಯನ್ನೂ, ಕುಪ್ರಸಿದ್ಧ ವ್ಯಕ್ತಿಗಳ ದ್ವೇಷವನ್ನೂ ಗಳಿಸಿದ್ದ ಅಧಿಕಾರಿಯೊಬ್ಬನನ್ನು ಕೇವಲ 2 ವರ್ಷದೊಳಗೆ ಒಂದು ಕಡೆಯಿಂದ ವರ್ಗಾಯಿಸಿದರೆ, ಇದು ಯಾರೋ ರಾಜಕೀಯದವರ ಅಥವಾ ಪ್ರಭಾವಿಗಳ ಬೇಳೆ ಬೇಯಿಸಲು ಆದ ಏರ್ಪಾಡು ಎಂಬುದನ್ನು ಒಂದು ಚಿಕ್ಕ ಮಗುವೂ ಹೇಳುತ್ತದೆ.

ಶೃಂಗೇರಿಯ ವಲಯ ಅರಣ್ಯಾಧಿಕಾರಿಯಾಗಿದ್ದ ಲಕ್ಷ್ಮೀನಾರಾಯಣ ಅವರ ವರ್ಗಾವಣೆ ಇದೇ ಜಾತಿಗೆ ಸೇರುತ್ತದೆಂಬುದು ಶೃಂಗೇರಿ ವಲಯದ ವ್ಯಾಪ್ತಿಯ ಪ್ರತಿಯೊಬ್ಬ ಪ್ರಜ್ಞಾವಂತನ (ಮತ್ತು ಕಾಡುಕಳ್ಳನಲ್ಲದವನ) ಸ್ಪಷ್ಟ ಅಭಿಪ್ರಾಯವಾಗಿದೆ

ಸಂಬಂಧದ ಕೊಡುಗೆ?

ನಮ್ಮ ಕ್ಷೇತ್ರದ ಶ್ರೀಮಂತ ಪ್ಲಾಂಟರ್ ರೊಬ್ಬರು ಈಚೆಗೆ ರಾಜ್ಯ ಜನತಾ ಅಧ್ಯಕ್ಷರೊಡನೆ ಬೆಳೆಸಿದ ಸಂಬಂಧದ ಕೊಡುಗೆ ಈ ವರ್ಗಾವಣೆ ಎಂಬ ಮಾತು ಇಲ್ಲಿ ದಟ್ಟವಾಗಿ ಹಬ್ಬಿದೆ.

ಅಂತೂ, ಎರಡು ವರ್ಷಗಳ ಹಿಂದೆ ಮಾಫಿ ಪಾಸ್ ಮಾಡಿ ಅರಣ್ಯ ಕೊಳ್ಳೆ ಹೊಡೆದು ಈಗೆರಡು ವರ್ಷಗಳಿಂದ ಬಾಲ ಮುದುರಿಕೊಂಡು ಬೇರೆ-ಬೇರೆ ಉದ್ಯೋಗ [illegible] ಎಲ್ಲಾ ಅಪ್ರಾಮಾಣಿಕ ಅರಣ್ಯ ಕಂಟ್ರಾಕ್ಟರುಗಳೂ ಈ ಅರಣ್ಯಾಧಿಕಾರಿ ಇಲ್ಲಿಂದ ಜಾಗ ಖಾಲಿ ಮಾಡುವುದನ್ನೇ ಕಾದು ಮೊಟ್ಟೆಯೊಡೆದು ಹೊರ ಬರುವ ಮೊಸಳೆ ಮರಿಗಳಂತೆ ಕಣ್ಣು ಬಾಯಿ ತೆರೆದುಕೊಂಡಿದ್ದಾರೆ

ಎರಡು ವರ್ಷಗಳ ಹಿಂದೆ

ಎರಡು ವರ್ಷಗಳ ಹಿಂದೆ ಒಬ್ಬ ಅದಕ್ಷ, ಅಪ್ರಾಮಾಣಿಕ ರೇಂಜರಿಂದ ಇಲ್ಲಿ ಸಾಕಷ್ಟು ಹಾನಿಯಾಗಿತ್ತು. ಇಂದು ಈ ರೇಂಜರನ್ನು ದೂರುತ್ತಿರುವವರೇ ಅಂದು ಆ ಅಧಿಕಾರಿಯನ್ನು–ಆತನಿಗೆ ಆಗಲೇ ಇಲ್ಲಿ 5 ವರ್ಷ ಆಗಿದ್ದರೂ ಸಹ–ಇನ್ನೂ ಹೆಚ್ಚು ಕಾಲ ಇಲ್ಲೇ ಉಳಿಸಿಕೊಳ್ಳಲು ಅಂದು ಶಾಸಕರಾಗಿದ್ದ ಗೋವಿಂದ ಗೌಡರಿಗೆ ದುಂಬಾಲು ಬಿದ್ದು, ಕೊನೆಗೂ ಅವರಿಗೆ ವರ್ಗವಾದಾಗ 'ಸಂಪನ್ಮೂಲ' ಬಾಗೆಕ್ಕೆ ಹಾಕಿಸಿ ಕೊಡುವಲ್ಲಿ ಯಶಸ್ವಿಯಾದುದನ್ನು ಯಾರೂ ಮರೆತಂತಿಲ್ಲ.

ಆ ಅಧಿಕಾರಿಯ ಅವಧಿಯಲ್ಲಿ ಇಲಾಖೆ ಪೂರ್ಣ ಕುಲಗೆಟ್ಟಿತ್ತು. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಸುಮಾರು 15 ಸಾವಿರ ಮರಗಳು ಜೀವ ಕಳೆದುಕೊಂಡು ಶ್ರೀಮಂತರ ಪಾಲಾಗಿವೆಯೆನ್ನಲಾಗಿದೆ. ಅಂದಿನ ಆಡಳಿತ ಪಕ್ಷವಾದ ಕಾಂಗ್ರೆಸ್ಸಿಗೆ ತನ್ನ ಜಾತಿಯವರ ಜನಿವಾರ ಹಿಡಿದು ಓಟು ಹಾಕಿಸುವಷ್ಟು ಮಟ್ಟಿಗೆ ಸಕ್ರಿಯ ರಾಜಕೀಯ ಮಾಡಿದಂತಹ ವ್ಯಕ್ತಿ ಆತ.

ಕಾರ್ಯದಕ್ಷತೆಗೆ ಸಾಕ್ಷಿ

ಅಂಥ ಅಪ್ರಾಮಾಣಿಕತೆ, ಅದಕ್ಷತೆಗಳ ಒಂದಂಶವನ್ನಾದರೂ ಈ ರೇಂಜರಲ್ಲಿ ಕಾಣಲು ಸಾಧ್ಯವಿಲ್ಲವೆನ್ನುವುದಕ್ಕೆ ಅವರ ಕಾಲದಲ್ಲಿ ಶೃಂಗೇರಿ ವಲಯದಲ್ಲಿ ನೆಟ್ಟು ಬೆಳೆಸಿದ ಪ್ಲಾಂಟೇಶನ್‌ಗಳೇ ಸಾಕ್ಷಿ ಸಾಕು. ಯಾವುದೇ ಯಾವುದೇ ಮುಲಾಜಿಲ್ಲದೆ ಅಕ್ರಮ ನಾಟಾ ಕಡಿತದ ಪ್ರತಿಯೊಂದು ಘಟನೆಯನ್ನೂ ಬೆಂಬತ್ತಿ ಕೇಸು, ಜುಲ್ಮಾನೆ ಹಾಕಿ, ನಾಟಾದ ಕಳ್ಳ ಸಾಗಾಣಿಕೆಯನ್ನು ಈ ವಲಯದಲ್ಲಿ ಹೆಚ್ಚು–ಕಡಿಮೆ ಸಂಪೂರ್ಣವಾಗಿ ನಿಲ್ಲಿಸಿದ್ದರೆಂದರೆ ಉತ್ಪ್ರೇಕ್ಷೆಯಲ್ಲ.

ಅಲ್ಲದೆ, ತೀವ್ರ ಬರಗಾಲದ ಸಮಯದಲ್ಲಿ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ ವಿನಯ್ ಲೂಥ್ರರವರ ನೇತೃತ್ವದಲ್ಲಿ, ಊರಿನ, ತಾಲ್ಲೂಕಿನ ಎಲ್ಲಾ ವರ್ಗದ ಜನರನ್ನೂ ಸಂಘಟಿಸಿ, 100 ಲೋಡಿಗೂ ಹೆಚ್ಚು ಹುಲ್ಲನ್ನು ಸಂಗ್ರಹಿಸಿ ರವಾನಿಸುವಲ್ಲಿ ಇವರು ನಿರ್ವಹಿಸಿದ ಪಾತ್ರವನ್ನು ರಾಜ್ಯ ಮಟ್ಟದ ಪತ್ರಿಕೆಗಳೂ ಪ್ರಶಂಸಿಸಿವೆ.

ಇನ್ನೊಬ್ಬ ದಕ್ಷ ಸಿಗುವುದಿಲ್ಲವೆ?

ಕಾಡಿನ ಬಗ್ಗೆ ಅತ್ಯಂತ ಪ್ರೀತಿ ಇರುವ ಮಂತ್ರಿ ಗೋವಿಂದ ಗೌಡರು ಇವರ ದಕ್ಷತೆಯ ಅವಶ್ಯಕತೆ ಚಿಕ್ಕಮಗಳೂರು ವಲಯಕ್ಕೆ ಅತೀ ಅಗತ್ಯವಾಗಿದೆ ಎಂದು ಹೇಳಿದ ವದಂತಿ ಇದೆ. ಆದರೆ ಇದು ಎಷ್ಟು ಸಮಂಜಸ ಎಂಬುದನ್ನು ಅವರು ಇನ್ನೊಮ್ಮೆ ಯೋಚಿಸುವುದೊಳಿತು. ಏಕೆಂದರೆ, ಇವರನ್ನು ಇಲ್ಲಿಯೇ [illegible] (ನಾಲ್ಕನೇ ಪುಟಕ್ಕೆ)

ಸಮಸ್ಯೆಗಳ ಬಲೆ ಹರಿಯಲಾರದ ಗಿರಿಜನರು : ಒಂದು ಮಾದರಿ — ತಲುವಂತಿ ಕೊಡಿಗೆ

ಕಾಡಿನ ನಡುವೆ ಕತ್ತಲಲ್ಲಿ ವಾಸಿಸುವ ತಲುವಂತಿಕೊಡಿಗೆ ಗ್ರಾಮದ ಜನರ ಬದುಕಿನ ಸಮಸ್ಯೆಗಳು ಒಂದೆರಡಲ್ಲ.

ಕೂಲಿಯೊಂದಿಗೆ ಬೀಳಿನ ಬುಟ್ಟಿ ಹೆಣೆದು ಜೀವಿಸುವ ಈ ಮಂದಿಯು ಆಸರೆಯಾಗಿ ಇರುವ ತುಂಡು ಭೂಮಿಯ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಗಳಿಗೆ ಲೆಕ್ಕವಿಲ್ಲ.

ಅಧಿಕಾರಿಗಳ ಉಪೇಕ್ಷೆಯಿಂದ ಅರ್ಜಿಗಳು ಕಡತಗಳೊಳಗೆ ಹುದುಗಿ ಹೋಗಿವೆ. ರಸ್ತೆ, ದೀಪ, ಶಾಲೆ,ಸಂಚಾರ ವ್ಯವಸ್ಥೆ ಮುಂತಾದ ಸಮಸ್ಯೆಗಳು ಈ ಜನರನ್ನು ಹಿಂಬಾಲಿಸಲು ಮರೆತಿಲ್ಲ.

ವರದಿ : ದಿನೇಶ್

ಸೌಜನ್ಯ: 'ಜನಮಿತ್ರ' ದಿನಪತ್ರಿಕೆ, ಚಿಕ್ಕಮಗಳೂರು

ಹಸಿರು ಬೆಟ್ಟಗಳ ನಡುವೆ ಇರುವ ತಲುವಂತಿಕೊಡಿಗೆ ಗ್ರಾಮದ ಜನರು ತಮ್ಮದೇ ಆದ ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಶೃಂಗೇರಿ ತಾಲ್ಲೂಕಿನ ಕೆ. ಮಸಿಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ ಈ ಗ್ರಾಮ ಕಿಗ್ಗದಿಂದ ಮಣ್ಣಿನ ರಸ್ತೆಯಲ್ಲಿ ಸುಮಾರು ೪ ಮೈಲು ದೂರ ಕ್ರಮಿಸಿದರೆ ಎದುರಾಗುತ್ತದೆ. ಮಲೆನಾಡಿನಲ್ಲ ಅಲ್ಲಲ್ಲಿ ಚದುರಿದಂತೆ ಇರುವ ಮನೆಗಳ ರೀತಿಯಲ್ಲೇ ಇಲ್ಲೂ ಹತ್ತು ಗಿರಿಜನ ಪಂಗಡದ ಕುಟುಂಬಗಳು ವಾಸ ಮಾಡುತ್ತಿವೆ.

ಜಮೀನು ಸಮಸ್ಯೆ

ಇಲ್ಲಿನ ಜನರ ಮುಖ್ಯ ಸಮಸ್ಯೆ ಜಮೀನು ಮಂಜೂರಾತಿಯದು. ಕೂಲಿ, ಬಿಡುವಾದಾಗ ಬೀಳಿನ ಬುಟ್ಟಿಯನ್ನು ಹೆಣೆದು ಬದುಕುವ ಈ ಮಂದಿ ತಲಾ ಎರಡು ಎಕರೆಯಷ್ಟು ಪ್ರದೇಶವನ್ನು ಸಾಗುಮಾಡಿಕೊಂಡು ಬಂದಿದ್ದು ಗಂಜಿಗಾಗಿ ಒಂದಿಷ್ಟು ಬತ್ತ ಬೆಳೆಯುತ್ತಾರೆ.

ಬದುಕಿನ ಬುತ್ತಿಗೆ ಆಸರೆಯಾಗಿರುವ ಭೂಮಿಯನ್ನು ತಮಗೇ ಮಂಜೂರು ಮಾಡಿಕೊಡಿ ಎಂಬ ಬೇಡಿಕೆಯ ಅರ್ಜಿ ಪ್ರತಿವರ್ಷ ಅಧಿಕಾರಿಗಳ, ಶಾಸಕರ ಕೈ ಸೇರುತ್ತಿದೆ. ಆದರೆ ಜಮೀನು ಮಂಜೂರು ಆಗಿಲ್ಲ.

ಶಿಥಿಲ ರಸ್ತೆ

ಗ್ರಾಮಕ್ಕೆ ಹೋಗಲು ಸರಿಯಾದ ರಸ್ತೆ ಸಂಪರ್ಕವಿಲ್ಲ. ಇರುವ ರಸ್ತೆ ಶಿಥಿಲವಾಗಿದ್ದು ಕೆಲವೆಡೆ ಸ್ವಲ್ಪ ಉತ್ತಮವಾಗಿದೆ. ಇದೇ ರಸ್ತೆ ಕಾರೊಳ್ಳಿ ಕೊಡಿಗೆ, ಬೆಳಗೋಡು ಕೊಡಿಗೆಗೆ ಸಂಪರ್ಕ ಕಲ್ಪಿಸಿಕೊಡುತ್ತದೆಯಾದರೂ ತಲುವಂತಿ ಕೊಡಿಗೆಯಿಂದ ಮುಂದೆ ಹೋದಾಗ ಎದುರಾಗುವ ಹಳ್ಳವೊಂದು ಮಳೆಗಾಲದಲ್ಲಿ ಸಂಪರ್ಕವನ್ನು ಕಡಿತಗೊಳಿಸುತ್ತದೆ.

ಕಾಡುಕಳ್ಳರ ಹಾವಳಿಯಿಂದ ನಿರ್ಮಿತವಾದ ಈ ರಸ್ತೆಗೆ ಅಧಿಕಾರಿ ವಲಯಗಳಿಂದ ಸರಿಯಾದ ಮೋಕ್ಷ ದೊರೆತಿಲ್ಲ. ವಿದ್ಯುತ್ ಸೌಲಭ್ಯ ಈ ಗ್ರಾಮದವರೆಗೆ ಬಂದಿಲ್ಲ. ಸೀಮೆಎಣ್ಣೆ ದೀಪದ ಬೆಳಕಿನ ನಡುವೆ ಬದುಕು ಸಾಗಿಸುವ ಈ ಜನರ ಬದುಕು ಪರಿಶ್ರಮದ್ದೇ ಆಗಿದೆ.

ಶ್ರೀನಿವಾಸ, ಅಣ್ಣೇಗೌಡ, ಮಂಜಪ್ಪ, ರಾಮು, ತಮ್ಮಯ್ಯ ಮುಂತಾದವರು ಜಮೀನು ಮಂಜೂರಾತಿಗಾಗಿ ಕಾದವರಾಗಿದ್ದಾರೆ.

ಸಾಲ ಕೊಟ್ರೆ....

ಎಂಭತ್ತು ವರ್ಷದ ವೃದ್ಧೆ ನಾಗಮ್ಮ ಹೇಳುವಂತೆ ಬೀಳಿನ ಬುಟ್ಟಿ ನೇಯುವ ಬದುಕು ಲಾಭದಾಯಕವಲ್ಲ. ಬೀಳು ಸಿಕ್ಕಿದಾಗ ಬುಟ್ಟಿ. ದಿನಪೂರ್ತಿ ಕುಳಿತರೆ ೪–೫ ಬುಟ್ಟಿ ಹೆಣೆಯಬಹುದು. ಒಂದೊಂದು ಬುಟ್ಟಿಗೆ ೩ರಿಂದ ೪ ರೂ. ಸಿಕ್ಕರೆ ಜಾಸ್ತಿ. "ನಮ್ಗೆ ಒಂದಿಷ್ಟು ಸಾಲ ಕೊಟ್ರೆ ಆನುಕೂಲ" ಅನ್ನುತ್ತಾರೆ.

ಬುಟ್ಟಿ ಹೆಣೆಯೋ ಕೆಲ್ಸಕ್ಕೆ ಸಾಲ ಕೇಳೋದಕ್ಕೆ ಸೆಕ್ರೆಟರಿ ಹತ್ರ ಹೋದರೆ "ನೂರು ಇನ್ನೂರು ರೂಪಾಯ್ ಕೊಡ್ತಾರೆ ಅದ್ನೆಲ್ಲಾ ಯಾಕೆ ತಗೋಳ್ತಿರಾ?" ಅಂತಾರೆ ಎನ್ನುವ ಮಾತು ಇಲ್ಲಿನ ಕೆಲ ಮಹಿಳೆಯರದಾಗಿದೆ.

ಶಾಲೆ ಒಂದೂವರೆ ಮೈಲಿ ದೂರದ ಮಾಸ್ತಿಕೊಡಿಗೆಯಲ್ಲಿದೆ. ಆದ್ರೆ ಮಕ್ಕಳು ಅಲ್ಲಿಗೆ ಹೋಗಲು ಹಿಂದೇಟು ಹಾಕುತ್ತಿದ್ದು ಈ ಗ್ರಾಮದ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರು. ತಲುವಂತಿಕೊಡಿಗೆಗೆ ಶಾಲೆ ಮಂಜೂರಾಗಿ ಪುಟ್ಟ ಕೊಠಡಿ ನಿರ್ಮಾಣವಾಗಿತ್ತು. ಆದರೆ ದಾಯಾದಿಗಳ ಜಗಳ ಎಂಬಂತೆ ಕಾರೊಳ್ಳಿಕೊಡಿಗೆ–ತಲವಂತಿ ಕೊಡಿಗೆ ಜನರ ನಡುವೆ ಉದ್ಭವಿಸಿದ ಪೈಪೋಟಿಯಿಂದ ಶಾಲೆ ದೂರ ಸರಿಯುವಂತಾಯಿತು.

ಗೋಣೆಯಲ್ಲಿ ರೋಗಿ....

ಕಾಡಿನ ನಡುವೆ ಬದುಕು. ಯಾವುದೇ ಸಂಪರ್ಕ ಸಾಧನಗಳಿಲ್ಲ. ಪ್ರತಿಯೊಂದು

(3ನೇ ಪುಟಕ್ಕೆ)

ಶಿವರಾಮ ಕಾರಂತರ 'ಕುಡಿಯರ ಕೂಸು' ಕಾದಂಬರಿಯಲ್ಲಿ ಚಿತ್ರಿತವಾಗಿರುವ 'ಮಲೆಕುಡಿಯ'ರ ಮೂಲದವರೆಂದು ನಂಬಲಾಗಿರುವ 'ಗೌಡಲು' ಪಂಗಡದ ಗಿರಿಜನರ ಬದುಕು ಇಂದಿಗೂ ಕಾಡಿನ ನಡುವೆ ಹೆಚ್ಚೂ ಕಡಿಮೆ ಅದೇ ಪರಿಸ್ಥಿತಿಯಲ್ಲೇ ಇದೆಯೆನ್ನಬಹುದು. (ಈಗ ಅವರು ಕುಮರಿ ಜಮೀನು ಮಾತ್ರ ಕಡಿಯುವುದಿಲ್ಲ ಅಷ್ಟೆ. ಆದರೆ ಈಗಲೂ ಅವರಿಗೆ 'ಕುಂಬ್ರಿ ಗೌಡಲು' ಎಂಬ ಹೆಸರೂ ಇದೆ.)

ಇಂಥ ಕೆಲವು ನೂರು ಕುಟುಂಬಗಳು ಶೃಂಗೇರಿಯ ಸುತ್ತಮುತ್ತಲ ಸುಮಾರು ಹತ್ತಿಪ್ಪತ್ತು ಮೈಲಿ ಫಾಸಲೆಯೊಳಗಿನ ಕಾಡುಗಳೊಳಗೆ, ಕಾಡಿನ ಅಂಚಿನ ಹಳ್ಳಿಗಳಲ್ಲಿ ಒಂದು ಪ್ರತ್ಯೇಕ ಜನಾಂಗವಾಗಿ (ಪ್ರತ್ಯೇಕ 'ಜಾತಿ' ಕೂಡ) ಬದುಕುತ್ತಿದ್ದಾರೆ.

ಈ ಜನಾಂಗದಲ್ಲಿ ಈವರೆಗೆ ಕೇವಲ ಇಬ್ಬರು ಮಾತ್ರ—ಆಕಸ್ಮಿಕವಾಗಿಯೆಂಬಂತೆ—ಪದವೀಧರರಾಗಿದ್ದಾರೆ! ಅದರಲ್ಲೂ ಒಬ್ಬ ಮಹಿಳೆಯಂತೆ!! ಉಳಿದಂತೆ ಅಬ್ಬಬ್ಬ ಎಂದರೆ ಐದಾರು ಜನ ಹೈಸ್ಕೂಲು ಮುಗಿಸಿದವರಿರಬಹುದು. ಅದರಲ್ಲಿ ಬಹುತೇಕ ಎಲ್ಲರೂ ಕೊಪ್ಪ–ಶೃಂಗೇರಿ–ಮೂಡಿಗೆರೆ ತಾ||ಗಳ ಮಧ್ಯೆ ಬೆಟ್ಟಗಳ ನೆತ್ತಿಯಲ್ಲಿರುವ ಮೆಣಸಿನಹಾಡ್ಯ ಎಂಬ ಒಂದೇ 'ಕೊಡಿಗೆ'ಯವರು. ಪದವೀಧರ ಯುವಕನೂ ಇಲ್ಲಿಯವನೇ.

ಉಳಿದಂತೆ ಅವರ ಜೀವನ ವಿಧಾನ, ಆಚಾರ–ವಿಚಾರಗಳೆಲ್ಲ ಹಲವು ಶತಮಾನಗಳಷ್ಟು ಹಿಂದಿನಂತೆಯೇ ಇವೆಯೆನ್ನಬಹುದು—ಯಾವುದೇ 'ಆದಿವಾಸಿ'ಗಳಂತೆ.

ಅವರು ವಾಸಿಸುವ ಇಂಥ 8 'ಕೊಡಿಗೆ'ಗಳಲ್ಲಿ ತಲುವಂತಿ ಕೊಡಿಗೆಯೂ ಒಂದು. ದೂರದ ಚಿಕ್ಕಮಗಳೂರಿನ 'ಜನಮಿತ್ರ' ದಿನಪತ್ರಿಕೆಯ ಪ್ರತಿಭಾವಂತ ಯುವಕ ವರದಿಗಾರ ಗೆಳೆಯ ದಿನೇಶ್ ಅಲ್ಲಿಂದ ಇಲ್ಲಿಗೆ ಹುಡುಕಿಕೊಂಡು ಬಂದು, ಇವರ ಸಮಸ್ಯೆಗಳ ಕುರಿತು ಒಂದು ಸಂಕ್ಷಿಪ್ತ ವರದಿ ಮಾಡಿದ್ದಾರೆ. (ತಿಂಗಳಿಗೊಮ್ಮೆಯಾದರೂ ಅವರು ಇಂಥ ಕುಗ್ರಾಮಗಳನ್ನು ಸಂದರ್ಶಿಸಿ ವರದಿ ಮಾಡುತ್ತಿದ್ದಾರೆ.)

ತಾ|| 19–6–86ರ 'ಜನಮಿತ್ರ'ದ ಆ ವರದಿಯನ್ನಿಲ್ಲಿ ಯಥಾವತ್ತಾಗಿ ಮರು ಪ್ರಕಟಿಸಿದ್ದೇವೆ.

—ಸಂಪಾದಕ.

ಹೀಗೊಂದು ಪ್ರಶ್ನೆ!?

ಸಂಪತ್ತನ್ನುಂಟುಮಾಡದೇ ಅದನ್ನನುಭವಿಸಲಸಾಧ್ಯ
ಹೀಗೆನ್ನುವುದು ನಾ ಓದಿದ ಅರ್ಥ ಶಾಸ್ತ್ರ
ಪ್ರೀತಿಯನ್ನುಂಟು ಮಾಡಿಯೂ ಅದ ಅನುಭವಿಸಲು
ಆಗಿಲ್ಲ ಸಾಧ್ಯ!
ಹೀಗೇಕೆಂದು ನನ್ನ ಕಾಡುವುದು ತರ್ಕಶಾಸ್ತ್ರ

ನೋಡಿದಾ ನೋಟಕ್ಕೆ ಆಡಿದಾ ಮಾತಿಗೆ
ಕಲ್ಪನೆಯ ಅರ್ಥಗಳು ಹುಟ್ಟುವವು ನೂರಾರು
ನಿಲ್ಲುವವು ಒಗಟಾಗಿ ಬಾಳಿನಾ ನೆಮ್ಮದಿಗೆ
ಕಟ್ಟುವವು ಬಯಲಲ್ಲಿ ನವಿಗನಸಿನಾ ಸೂರು

ಪ್ರೀತಿಸಿದಾ ನನ್ನ ನೆಲದಲ್ಲಿ ಹೂವು ಅರಳಲೇ ಬೇಕಲ್ಲ!
ಎನಿಸುವ ನನ್ನನಿಸಿಕೆ, ನಿರೀಕ್ಷೆಗಳೆಲ್ಲಾ
ಪ್ರಾಮಾಣಿಕವಾದರೂ
ಹೂವು ಅರಳುವುದು ನನ್ನ ಮನೆಯಂಗಳದಲ್ಲಲ್ಲ!
ಆದರ ಕಂಪು ಮಾಯವಾಗದು ನಾ ಮೂಗು ಮುಚ್ಚಿದರೂ

ಹೀಗೇಕೆಂದರಿಯಲು ಸರಸ್ವತಿಯನೇ ಸಾಕ್ಷಾತ್ಕರಿಸಿ
ನೋಡಿ
ನೋಟಕ್ಕೆ ನೋಟ ಕೂಡಿ ಮಿಂಚು
ಹೊಳೆಯುವುದೆಂದೋ?
ನಾನರಿಯಲಾರದಾ ಮಾತು ಸಂಗೀತವಾಗಿ ಮೂಡಿ
ನನ್ನ ಪ್ರೀತಿಯ ಅರ್ಥಗಳು ಸತ್ಯವಾಗುವುದೆಂದೊ?

—ಸಿರಿವಾಸೆ ಲೋಕೇಶ್,
ಚಿಕ್ಕಮಗಳೂರು

ಬಡ ಹೆಣ್ಣಿನ ಬಾಳು

ಹೆಣ್ಣುಗಳು ಹುಟ್ಟುತ್ತಾವೆ
ಬಡವರಿಗೆ ಆಸ್ತಿ.
ಬೆಳೆಯುತ್ತಾವೆ ಬಾಳೆಯ
ಮರದಂತೆ ಮೈ ತುಂಬಿ
ಬಂದವರು ಕೇಳುವರು
ಹಣ, ಆಭರಣದ ರಾಶಿ
ಅರಿಸಿ ಬಿಟ್ಟ ಹಣ್ಣಿನಂತೆ
ಉಳಿಯುವರು ಹೆಣ್ಣಾಗಿ
ಕೊನೆಯಲ್ಲಿ ಸಿಗುವರು
ಬಾವಿ ಕೆರೆಯಲ್ಲಿ ಹೆಣವಾಗಿ

ನಿರಾಸೆಯಾದ ಮಂಗ

ಜುಟ್ಟಿಗೆ ಗುಂಪು ಕಟ್ಟಿದ
ಮೀನುಗಳನು ನೋಡಿ
ಮಂಗ ತಿಳಿಯಿತು ಕೊತ್ತಂಬರಿ ಕಟ್ಟೆಂದು
ಬಿಸಿಲಿಗೆ ನೀರಿನಲ್ಲಿ ಸ್ವಲ್ಪ
ಹೊಳೆದಾಗ
ಮಂಗವು ತಿಳಿಯಿತು ತೆಂಗಿನ
ಕಾಯಿ ಎಂದು
ಹರುಷದಿಂದ ಕುಣಿಯಿತು
ಮಂಗ ಅಂದು
ಭಟ್ಟರು ಸೀಳಿದ್ದಾಗ ತಿಳಿಯಿತು
ಅದು ಜುಟ್ಟೆಂದು!

—ಅಬ್ದುಲ್ ಖಾದರ್ ಬಾಬು,
ಟೆಲಿಫೋನ್ ಕ್ಯಾಂಪ್, ಹಿರೇಕೊಡಿಗೆ

ಓದುಗರ ಪತ್ರಗಳು

ಹರಿಹರಪುರ ಕಿ|| ಕಾಲೇಜಿಗೆ ಅನುದಾನ ಮಂಜೂರಾತಿಗೆ ಸಹಕರಿಸಿದವರಿಗೆ ಅಭಿನಂದನೆ

ಮಾನ್ಯರೆ,

ಹರಿಹರಪುರದ ಕಿರಿಯ ಕಾಲೇಜಿಗೆ ಇತ್ತೀಚೆಗೆ ಸರ್ಕಾರದಿಂದ ಅನುದಾನ ಮಂಜೂರಾಗಿದೆ. ಈ ಮಂಜೂರಾತಿ ಬಗ್ಗೆ ಪ್ರಯತ್ನಪಟ್ಟು ಸಹಕರಿಸಿದ ಜಿಲ್ಲಾ ಸಚಿವರಾದ ಗೋವಿಂದಗೌಡರನ್ನೂ, ಕೊಪ್ಪ ತಾ|| ಜನತಾ ಪಕ್ಷದ ಅಧ್ಯಕ್ಷ ಬಾಳ್ತ್ರಾರು ಆನಂದ ರಾಮ ಭಟ್ಟರನ್ನೂ ಹರಿಹರಪುರ ಜನತೆಯ ಪರವಾಗಿ ಹಾಗೂ ಕಿರಿಯ ಕಾಲೇಜು ಪೋಷಕರ ಸಮಿತಿಯ ಕಾರ್ಯದರ್ಶಿಯಾಗಿ ಪೋಷಕರ ಪರವಾಗಿ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

—ಹೆಚ್. ಎಸ್. ಮಂಜುನಾಥ್,
ಹರಿಹರಪುರ.

ಸಾರ್ವತ್ರಿಕ ಕ್ಷಾಮವನ್ನು ತಪ್ಪಿಸಬೇಕಿದ್ದಲ್ಲಿ ನಮ್ಮ ಅರಣ್ಯಗಳನ್ನು ಉಳಿಸಬೇಕು; ಅದಕ್ಕೆ ಇನ್ನುಳಿದಿರುವುದು ಐದೇ ವರ್ಷ !

"ಭಾರತದ ನಿತ್ಯಹಸುರು ಅರಣ್ಯಗಳನ್ನು ಉಳಿಸಿಕೊಳ್ಳಲು ತಕ್ಕ ಕ್ರಮಗಳನ್ನು ಕೈಕೊಳ್ಳುವುದು ಇನ್ನು ಐದು ವರ್ಷಗಳ ಒಳಗೆ ಆಗಬೇಕು; ಹೀಗಾಗದಿದ್ದರೆ ಸದ್ಯದ ಅರಣ್ಯನಾಶದ ತೀವ್ರ ಗತಿಯಿಂದಾಗಿ ಐದು ವರ್ಷಗಳ ಅನಂತರ ಇಂತಹ ಅರಣ್ಯಗಳೇ ಭಾರತದಲ್ಲಿ ಇರಲಿಕ್ಕಿಲ್ಲ."—ಇದು ಸ್ಟ್ರೇಲಿಯಾದ Rainforest Information Centreನ (ಧಾರಾಳ ಮಳೆಯಿರುವ ಪ್ರದೇಶಗಳಲ್ಲಿಯ ಅರಣ್ಯಗಳ ಬಗೆಗಿನ ಮಾಹಿತಿ ಕೇಂದ್ರ) ಅರಣ್ಯಶಾಸ್ತ್ರ ತಜ್ಞ ಪ್ಯಾಟ್ರಿಕ್ ಆ್ಯಂಡರ್‌ಸನ್ ಈಚೆಗೆ ಕೊಚ್ಚಿಯಲ್ಲಿ ಉಚ್ಚರಿಸಿದ ಗಂಭೀರ ಎಚ್ಚರಿಕೆಯಿದು.

ಪ್ಯಾಟ್ರಿಕ್ ಆ್ಯಂಡರ್‌ಸನ್ ಮತ್ತು ಅವರ ಸಹೋದ್ಯೋಗಿ ಜಾನ್ ಸೀಡ್ ಈಚೆಗೆ ಹಲವು ತಿಂಗಳುಗಳ ಕಾಲ ಭಾರತದ ಅರಣ್ಯ ಪ್ರದೇಶಗಳ ಅಧ್ಯಯನ ಮಾಡಿರುವರು. ಪಶ್ಚಿಮ ಭಾರತದ 'ನರ್ಮದಾ ಆಣೆಕಟ್ಟು ಯೋಜನೆ'ಗೆ ನೆರವನ್ನು ನೀಡದಂತೆ ವಿಶ್ವಬ್ಯಾಂಕನ್ನು ತಾನು ವಿನಂತಿಸಲಿರುವುದಾಗಿ ಆ್ಯಂಡರ್‌ಸನ್ ಅವರು ಕೊಚ್ಚಿಯಲ್ಲಿ ಬಯಲಾಗಿಸಿದರು. 'ಜೀವಿ ಪರಿಸ್ಥಿತಿ ಶಾಸ್ತ್ರ'ದ ದೃಷ್ಟಿಯಿಂದ 'ನರ್ಮದಾ ಆಣೆಕಟ್ಟು ಯೋಜನೆ'ಯನ್ನು ಅನರ್ಥಕಾರಕವೆಂದು ಖಂಡಿಸಲೇ ಬೇಕಾಗಿದೆ ಎನ್ನುವುದು ಅವರ ಖಂಡಿತ ಅಭಿಪ್ರಾಯ. ನರ್ಮದಾ ನದಿಯ ಜಲವಿಭಾಜಕ ಸ್ಥಳದಲ್ಲಿ (watershedನಲ್ಲಿ) 3,000 ಒಡ್ಡುಗಳನ್ನು ನಿರ್ಮಿಸುವುದೆಂದರೆ ಭಾರತದಲ್ಲಿ ದಟ್ಟ ಕಾಡಿನಿಂದ ಆವೃತ್ತವಾಗಿ ಜಲವಿಭಾಜಕ ಸ್ಥಳವಾಗಿ ಉಳಿದಿರುವ ಏಕಮಾತ್ರ ಸ್ಥಳವು ಇನ್ನಿರದಂತೆ ಮಾಡುವುದು, ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ಗುಡ್ಡಗಾಡು ನಿವಾಸಿಗಳನ್ನು ನಿರ್ವಸತಿಗರನ್ನಾಗಿ ಮಾಡುವುದು ಎಂದು ಆ್ಯಂಡರ್‌ಸನ್ ಅವರು ವ್ಯಾಕುಲಿತರಾಗಿದ್ದಾರೆ.

ಭಾರತದಲ್ಲಿ ಇನ್ನೂ ಉಳಿದಿರುವ ನಿತ್ಯಹಸಿರು ಅರಣ್ಯಗಳು ಇನ್ನು ಬಹುಕಾಲ ಉಳಿಯುವುದು ಶಕ್ಯವಲ್ಲ ಎಂಬ ತನ್ನ ಅನಿಸಿಕೆಗೆ ಅವರು ನೀಡುವ ಕಾರಣಗಳು ಇವು ಮೂರು:– 'ಅಧಿಕೃತ' ಅಥವಾ 'ಕಾನೂನುಬದ್ಧ' ಎಂದೆನ್ನಿಸುವ ಅರಣ್ಯನಾಶ, ಕಾನೂನುಬಾಹಿರವಾದ ಅರಣ್ಯನಾಶ ಮತ್ತು ಆಣೆಕಟ್ಟುಗಳ ನಿರ್ಮಾಣ.

ಧಾರಾಳ ಮಳೆ ಬೀಳುವ ಪ್ರದೇಶಗಳ ಅರಣ್ಯಗಳು ಎಷ್ಟು ವೈವಿಧ್ಯಮಯ ಆಗಿರುವುದೆಂದರೆ, ಅಂಡಮಾನ್ ದ್ವೀಪಗಳಲ್ಲಿಯ ಕೆಲವೇ ಹೆಕ್ಟೇರು ವಿಸ್ತೀರ್ಣದ ಕಾಡುಗಳಲ್ಲಿ ಲಭ್ಯವಾಗಿರುವಷ್ಟು ವಿಭಿನ್ನ ವೃಕ್ಷಜಾತಿಗಳು ಸಮಸ್ತ ಉತ್ತರ ಯೂರೋಪಿನಲ್ಲೂ ಲಭ್ಯವಾಗಿಲ್ಲವಂತೆ. ಇಂತಹ ಪ್ರದೇಶಗಳ ಸ್ವಂತಿಕೆಯನ್ನು ದೃಢಸಂಕಲ್ಪದಿಂದ ಮತ್ತು ಯೋಜನಾಬದ್ಧವಾಗಿ ಉಳಿಸಿಕೊಳ್ಳದಿದ್ದರೆ, ಇಲ್ಲಿಯ ವೈವಿಧ್ಯವು ಇನ್ನಿಲ್ಲವಾಗುವುದು ಶಕ್ಯವಿದೆಯಂತೆ.

ಭಾರತದ ಧಾರಾಳ ಮಳೆಬೀಳುವ ಪ್ರದೇಶಗಳ ಪೈಕಿ ಅರಣ್ಯಗಳನ್ನು ಹೊಂದಿದ್ದು, ಇನ್ನೂ ಉಳಿದಿರುವವು ಇವು ಮಾತ್ರ: 1) ಪಶ್ಚಿಮ ಘಟ್ಟ, 2) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, 3) ಅಸ್ಸಾಂ ಮತ್ತು 4) ಅರುಣಾಚಲ ಪ್ರದೇಶ. ಉಪಗ್ರಹಗಳಿಂದ ಲಭಿಸಿರುವ ಚಿತ್ರಗಳು ತೋರಿಸಿರುವಂತೆ, ಈ ನಾಲ್ಕೂ ಪ್ರದೇಶಗಳಲ್ಲಿ ಅರಣ್ಯನಾಶವು ಈಗಾಗಲೇ ಗಮನೀಯವಾಗಿ ಆಗಿದೆ.

(4ನೇ ಪುಟಕ್ಕೆ).

'ಜ್ಞಾನಮಂದಿರ'ವೋ ಅಥವಾ....

ಸರ್ಕಾರ 1982–83ರಲ್ಲಿ ಒಂದು ಹೊಸ ಕಾರ್ಯಕ್ರಮ ಕೈಗೊಂಡಿತು. ಹರಿಜನ–ಗಿರಿಜನರಿಗೆ ಜ್ಞಾನವನ್ನು ಹುಟ್ಟಿಸುವ ಪ್ರಯತ್ನ.

ಇವರ ಮನೆಯ ಸಮೀಪದಲ್ಲಿ ಊರಿಗೆ ಒಂದರಂತೆ 15 ಸಾವಿರ ರೂ. ಖರ್ಚು ಮಾಡಿ ಒಂದು ಮಂದಿರವನ್ನು ಕಟ್ಟಿಸಿದರು. ಇದೇ 'ಜ್ಞಾನಮಂದಿರ' ಅಥವಾ ಭಜನಾ ಮಂದಿರ.

ಕಟ್ಟಿದ ಕೆಲವು ದಿನಗಳ ನಂತರ ಕಂಟ್ರಾಕ್ಟರ್ ಅವರುಗಳ ಕೈಗೆ ಬೀಗವನ್ನು ವರ್ಗಾಯಿಸಿದರು. ಇದರ ಪ್ರಾರಂಭೋತ್ಸವ ಅಥವಾ ಯಾವುದೇ ಕಾರ್ಯಕ್ರಮ ನಡೆಯಲಿಲ್ಲ. ಇಲ್ಲಿ ಏನು ಮಾಡಬೇಕೆಂದು ಸಹ ಹೇಳಲಿಲ್ಲ.

ಈ ಕಟ್ಟಡಗಳು ನಿರ್ಮಿತವಾದ ಎರಡು ಮೂರು ವರ್ಷಗಳಲ್ಲಿ ಒಮ್ಮೆಯಾದರೂ ಭಜನೆ ಮಾಡಿದ್ದಿಲ್ಲ. ಈಗ ಇವರಿಗೆಲ್ಲ ಬೇಸಿಗೆಯ ಮನೆಯಾಗಿದೆ. ಜಗಳ, ದೊಂಬಿ ನಡೆಯುವುದಾದರೆ ಇಲ್ಲಿಯೇ. ಕೆಲವೊಮ್ಮೆ ಯಾರಿಗಾದರೂ ಅನಾರೋಗ್ಯವಾದಲ್ಲಿ ದೈವದ ಕಾಟ ಎಂಬ ಮೂಢ ನಂಬಿಕೆಯಿಂದ ಒಬ್ಬ ವ್ಯಕ್ತಿಗೆ ದೈವ ಬರಿಸುವುದು; ವಿಚಾರಣೆ ಮಾಡುವುದು ಇಲ್ಲೇ.

ಅಜ್ಞಾನದ ಕುರುಹಾಗಿ ಗೋಡೆ ತುಂಬ ಹಂಚು, ಇಟ್ಟಿಗೆಯ ಚೂರು ಇಂತಹ ವಸ್ತುಗಳಿಂದ ಅಸಹ್ಯಬರವಣಿಗೆ, ವಿಚಿತ್ರ ಸಂಕೇತಗಳನ್ನು ನಾವು ಇಲ್ಲಿ ಕಾಣಬಹುದು.

ಸಾವಿರಾರು ರೂ. ಖರ್ಚು ಮಾಡಿ ಇಂತಹ ಕಟ್ಟಡ ಕಟ್ಟಿ ಈ ರೀತಿಯ ಚಟುವಟಿಕೆಗಳು ಕಂಡುಬಂದರೆ ಸರ್ಕಾರಕ್ಕೆ ಸಂತೋಷವೆ? ಇದೇ ಸರ್ಕಾರದ ಜ್ಞಾನ ಬೆಳೆಸುವ ಯೋಜನೆಯೇ? ಇವುಗಳನ್ನೆಲ್ಲ ಸಂಬಂಧಪಟ್ಟ ಅಧಿಕಾರಿಗಳು ನೋಡಿಲ್ಲವೆ? ಅಥವಾ ನೋಡಿಕೊಂಡು ಸುಮ್ಮನಿರುವರೆ?

ಇಂಥ ನಿರುಪಯುಕ್ತ ಯೋಜನೆ–ಕೆಲಸಗಳ ವೆಚ್ಚದ ಹೊರೆಯನ್ನೆಲ್ಲ ಯಾರು ಹೊರಬೇಕು? ನಷ್ಟವನ್ನು ಯಾರು ಭರಿಸಬೇಕು? ಇದೆಲ್ಲ ಚುನಾವಣೆಯಲ್ಲಿ ಓಟಿಗಾಗಿ ಮಾತ್ರ; ನಿಜವಾದ ಜ್ಞಾನ ಪ್ರಸಾರದಂಥ ಯಾವ ಉದ್ದೇಶವೂ ಇದರಲ್ಲಿಲ್ಲ ಎಂಬ ನಂಬಿಕೆಯನ್ನೇ ಒಪ್ಪುವುದೆ?

—ಎಸ್. ಕೆ. ಶ್ರೀಕಾಂತ,
ಸೊನ್ನೆಕೊಡಿಗೆ, ಬೇಗಾರು.

ತಲುವಂತಿ ಕೊಡಿಗೆಯ ಗಿರಿಜನರ ಸಮಸ್ಯೆಗಳು

(ಎರಡನೇ ಪುಟದಿಂದ)

ವಸ್ತುವನ್ನೂ ತಲೆಹೊರೆಯ ಮೇಲೆ ತರಬೇಕು. ಹುಷಾರಿಲ್ಲದಾಗ ಗೋಣಿ ಚೀಲದಲ್ಲಿ ಕಟ್ಟಿ ರೋಗಿಯನ್ನು ಸಾಗಿಸುವ ಪರಿಸ್ಥಿತಿ.

ತುಂಡು ಜಮೀನನ್ನು ಉಳಲು ಕೆಲವರಿಗೆ ಎತ್ತುಗಳಿಲ್ಲ. ಪರರ ಮುಂದೆ ಹೋಗಿ ನಿಂತು ಎತ್ತು ಕೇಳಬೇಕು. ಸಿಕ್ಕಿದರೆ ಉತ್ತು ಬಿತ್ತುತ್ತಾರೆ. ಇಲ್ಲದಲ್ಲಿ ಇಲ್ಲ. ಇಲಾಖೆ ಎತ್ತುಗಳನ್ನು ನೀಡಲು ಮುಂದಾದರೆ ನೊಂದ ಜನರಿಗೆ ಪ್ರಯೋಜನವಾಗುತ್ತದೆ.

ಗ್ರಾಮಲೆಕ್ಕಿಗರು, ರೆವಿನ್ಯೂ ಇನ್‌ಸ್ಪೆಕ್ಟರ್‌ರವರು ಈ ಗ್ರಾಮದತ್ತ ಸುಳಿಯುವುದೇ ಇಲ್ಲವಂತೆ. ಗ್ರಾಮಸ್ಥರೇ ಅವರ ಬಳಿ ಹೋದರೆ 'ಇಂದು ಬಾ ನಾಳೆ ಬಾ' ಎಂಬ ಸತಾವಣೆಯಂತೆ.

ಈ ರೀತಿ ತನ್ನದೇ ಆದ ಸಮಸ್ಯೆ ಎದುರಿಸುತ್ತಿರುವ ತಲುವಂತಿಕೊಡಿಗೆ ಗ್ರಾಮದ ಸಮಸ್ಯೆಯ ಸುರುಳಿಗಳಿಗೆ ಅಧಿಕಾರಿಗಳು ಮಾತ್ರ ಗತಿ ಕಾಣಿಸಬೇಕಾಗಿದ್ದು ಈ ನಿಟ್ಟಿನಲ್ಲಿ ಅಧಿಕಾರಿ ವರ್ಗ, ಸಚಿವರು ಗಮನಿಸಬೇಕಾಗಿದೆ. ಜಮೀನು ಮಂಜೂರಾತಿ ಮಾಡುವ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಬೇಕಾಗಿದೆ.

ಲಿಂಕನ್ ಶಿಕ್ಷಕನಿಗೆ ಹೇಳಿದ್ದು

ನಾ ಬಲ್ಲೆ
ಎಲ್ಲರೂ ನ್ಯಾಯಪರರಲ್ಲ
ಎಲ್ಲರೂ ಸತ್ಯವಂತರಲ್ಲ ಎಂಬುದನು
ಆದರೆ ಪ್ರತಿಯೊಬ್ಬ ಮುಠ್ಠಾಳನಿಗೂ ಪ್ರತಿಯಾಗಿ
ಒಬ್ಬ ಧೀರೋದಾತ್ತ,
ಪ್ರತಿಯೊಬ್ಬ ಸ್ವಾರ್ಥಿ ರಾಜಕಾರಣಿಗೆ ಬದಲು
ಒಬ್ಬ ನಿಷ್ಠಾವಂತ ನಾಯಕ,
ಪ್ರತಿಯೊಬ್ಬ ಶತ್ರುವಿಗೆ ಬದಲು
ಒಬ್ಬ ಸನ್ಮಿತ್ರನಿರುವನೆಂಬುದನು ಕಲಿಸು

ನಿನಗೆ ಸಾಧ್ಯವಾದರೆ ಕಲಿಸು
ಗಳಿಸಿದ ಒಂದು ಡಾಲರು
ಸಿಕ್ಕ ಐದಕ್ಕಿಂತ ಹೆಚ್ಚು ಬೆಲೆಯುಳ್ಳದೆಂಬುದನು.
ಕಲಿಸು ಸೋಲುವುದನು ಕಲಿಯಲು
ಮತ್ತು ಗೆಲುವಿನಲಿ ಹರ್ಷಿಸುವುದನು.

ಪುಸ್ತಕಗಳ ಅದ್ಭುತಗಳನು ಅವನಿಗೆ ಕಲಿಸು
ಆದರೆ ಆಕಾಶದ ಹಕ್ಕಿಗಳನು
ಹಾರಾಡುವ ದುಂಬಿಗಳನು ಮತ್ತು
ಹಸಿರು ಮಲೆಯ ಹೂಗಳನು ಕುರಿತು
ಧ್ಯಾನಿಸಲು ಅವನಿಗೆ ಬಿಡುವು ಮಾಡಿಕೊಡು.

ಶಾಲೆಯಲಿ ವಂಚಿಸುವುದಕಿಂತ
ಫೇಲಾಗುವುದು ಹೆಚ್ಚು ಗೌರವವೆಂಬುದನು ಕಲಿಸು
ಎಲ್ಲರೂ ತಪ್ಪೆಂದಾಗ
ತನ್ನ ವಿಚಾರಗಳಲಿ ಅವನು ನಂಬಿಕೆ
ಉಳಿಸಿಕೊಳ್ಳಲು ಕಲಿಸು.

ನಯವ ಜನರಲಿ ವಿನಯದಿ ಮತ್ತು
ಒರಟರಲಿ ಒರಟುತನದಿ ನಡೆಯುವುದನು ಕಲಿಸು
ಬೆವರು ಬುದ್ಧಿಗಳನು
ಹೆಚ್ಚು ಬೆಲೆ ತೆರುವವನಿಗೆ
ಮಾರುವುದನು,
ಆದರೆ ತನ್ನ ಹೃದಯ ಮತ್ತು ಆತ್ಮಕ್ಕೆ
ಬೆಲೆಯ ಚೀಟಿಯನು
ಎಂದಿಗೂ ಅಂಟಿಸದಿರುವುದನು ಕಲಿಸು

ಬೇಸರಗೊಂಡಾಗ ನಗುವುದನು
ಕಣ್ಣೀರಿನಲಿ ಅವಮಾನವಿಲ್ಲೆಂಬುದನು ಮತ್ತು
ತನ್ನಲ್ಲಿ ತಾನು ವಿಶ್ವಾಸಹೊಂದುವುದನು ಕಲಿಸು
ಆಗಲೇ ಅವನಿಗೆ ಮಾನವೀಯತೆಯಲಿ
ದಿವ್ಯ ವಿಶ್ವಾಸ ಮೂಡುವುದು.

(ಅಮೆರಿಕದ ಅಧ್ಯಕ್ಷ ಅಬ್ರಹಾಂ ಲಿಂಕನ್ ತನ್ನ ಮಗ ಕಲಿಯುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯನಿಗೆ ಬರೆದ ಒಂದು ಪತ್ರ)

—ಅನು: ಬಿ. ವಿ. ವೀರಭದ್ರಪ್ಪ
ಸೌಜನ್ಯ: 'ಲಂಕೇಶ್ ಪತ್ರಿಕೆ'

ಅರಣ್ಯ ಉಳಿಸಲು ಐದೇ ವರ್ಷ

(ಮೂರನೇ ಪುಟದಿಂದ)

The World Rain-Forest Action Network (ವಿಶ್ವದಲ್ಲಿ ಧಾರಾಳ ಮಳೆಬೀಳುವ ಸಮಸ್ತ ಪ್ರದೇಶಗಳಲ್ಲಿಯ ಅರಣ್ಯಗಳ ರಕ್ಷಣೆಗಾಗಿ ತಕ್ಕ ಕ್ರಮ ಕೈಕೊಳ್ಳಲು ರೂಪಿತವಾಗಿರುವ ಜಾಲ) ಎನ್ನುವುದು ಇದೆ. ಆ್ಯಂಡರ್‌ಸನ್ ಅವರ ಸಂಘಟನೆಯು ಆ ಜಾಲದ ಅಂಗ ಸಂಸ್ಥೆಯಷ್ಟೆ. ವರ್ಧಮಾನ ರಾಷ್ಟ್ರಗಳು ಹಮ್ಮಿಕೊಂಡಿರುವ ಯೋಜನೆಗಳಲ್ಲಿ 'ಜೀವಿ ಪರಿಸ್ಥಿತಿ ಶಾಸ್ತ್ರ'ದ ದೃಷ್ಟಿಯಿಂದ ಯುಕ್ತವಲ್ಲವೆಂದು ಅನ್ನಿಸುವಂತಹುಗಳಿಗೆ ಆರ್ಥಿಕ ನೆರವನ್ನು ನೀಡದಂತೆ ಆ ಜಾಲವು ವಿಶ್ವ ಬ್ಯಾಂಕನ್ನೂ ಇತರ ಪಾಶ್ಚಾತ್ಯ ಹಣಕಾಸು ಸಂಸ್ಥೆಗಳನ್ನೂ ಒತ್ತಾಯಿಸುತ್ತಿದೆಯಂತೆ.

[9-3-1986ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಯ ಆಧಾರದಿಂದ. ಸೌಜನ್ಯ: "ಬಳಕೆದಾರರ ವೇದಿಕೆ", 15-5-86]

ಅರಣ್ಯಾಧಿಕಾರಿಗೆ ಎತ್ತಂಗಡಿ

(1ನೇ ಪುಟದಿಂದ)

ಉಳಿಸಿ, ಅಲ್ಲಿಗೆ ಇನ್ನೊಬ್ಬ ದಕ್ಷ ಅಧಿಕಾರಿಯನ್ನು ಕರೆತರಲು ಸಾಧ್ಯವಿರಲಿಲ್ಲವೆ?

ಕೆಲವು ಬಡಬಗ್ಗರ ಪ್ರಕರಣಗಳಲ್ಲಿ ಸ್ವಲ್ಪ ಈ 'ದಕ್ಷತೆ'ಯ ಅತಿರೇಕ (ವಿಪರೀತ ಹೊಡೆತ ಇತ್ಯಾದಿ) ಮುಂತಾದುವು ಲಕ್ಷ್ಮೀನಾರಾಯಣರಿಂದ ನಡೆದಿದ್ದರೂ ಅವರ ಇಂಥ ಯಾವುದೇ ಸಣ್ಣ ಪುಟ್ಟ ದೋಷಗಳನ್ನು ತಿಳಿ ಹೇಳಿ ಸರಿಪಡಿಸಬಹುದಿತ್ತು.

ವರ್ಗಾವಣೆ ಸಲ್ಲ

ಒಟ್ಟಾರೆ ಈ ಅಧಿಕಾರಿಯನ್ನು ಬೇರೆಡೆಗೆ ವರ್ಗ ಮಾಡಿರುವುದು ಅರಣ್ಯದ ಬಗ್ಗೆ ಪ್ರಾಮಾಣಿಕ ಕಾಳಜಿ ಇರುವ ಮಂತ್ರಿ ಗೋವಿಂದಗೌಡರ ಪಾಲಿಗೆ ರಾಜಕೀಯವಾಗಿ ಸಹ ಬೇರೆ ಬಣ್ಣಕ್ಕೆ ತಿರುಗಿ ಪ್ರತಿಕೂಲ ಪರಿಣಾಮ ಉಂಟುಮಾಡುವ ಸೂಚನೆಗಳಿವೆ. ಅದಕ್ಕಾಗಿಯಲ್ಲದಿದ್ದರೂ ಒಬ್ಬ ಅಧಿಕಾರಿ ಒಂದು ಪ್ರದೇಶದಲ್ಲಿ ಸಮರ್ಪಕವಾಗಿ, ದಕ್ಷವಾಗಿ ಕೆಲಸ ಮಾಡಿ, ತನ್ನ ಸಾಮರ್ಥ್ಯವನ್ನು ಸಂಪೂರ್ಣವಾಗಿ ತೋರ್ಪಡಿಸಿ, ಅಲ್ಲಿನ ಪ್ರಗತಿಯ ಬಗ್ಗೆ ಹೆಮ್ಮೆ ಪಡುವಷ್ಟಕ್ಕಾದರೂ ಅವಕಾಶ ಸಿಕ್ಕದಿದ್ದರೆ ಬಹು ಬೇಗ ಆತನ ಉತ್ಸಾಹ ತಣ್ಣಗಾಗಬಹುದು. ಅಲ್ಲದೆ, ಈ ವಲಯ ಕೂಡ ಬಹಳ ಪ್ರಮುಖವಾದ ಕಾಡುಗಳುಳ್ಳ, ಅಂತೆಯೇ ಕಳ್ಳಸಾಗಣೆಗೆ ಪಕ್ಕಾಗಿರುವ ವಲಯವಾಗಿರುವುದರಿಂದ ಲಕ್ಷ್ಮೀನಾರಾಯಣರನ್ನು ಇನ್ನೂ ಕೆಲವು ಕಾಲ ಅವರ ಅವಧಿ ಪೂರ್ತಿ ಮುಗಿಯುವವರೆಗಾದರೂ—ಇಲ್ಲೇ ಉಳಿಸಿಕೊಳ್ಳುವುದು ಎಲ್ಲಾ ದೃಷ್ಟಿಯಿಂದಲೂ ಯುಕ್ತ.

ಪ್ರೌಢಶಾಲೆ ಕಟ್ಟಡ ಉದ್ಘಾಟನೆ

ಮೇಲ್ಪಾಲು: ಇಲ್ಲಿನ ಸರ್ಕಾರಿ ಪ್ರೌಢಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಜೂನ್ 14ರಂದು ಸಚಿವ ಗೋವಿಂದಗೌಡರು ನೆರವೇರಿಸಿದರು. ಜಿಲ್ಲಾಧಿಕಾರಿಗಳು ಅಧ್ಯಕ್ಷತೆ ವಹಿಸಿದ್ದು, ಲೋಕೋಪಯೋಗಿ ಇಲಾಖೆ ಎ॥ ಇಂಜಿನಿಯರ್ ಪಿ. ಆರ್. ರಾಧಾಕೃಷ್ಣ ರೆಡ್ಡಿ ಮುಖ್ಯ ಅತಿಥಿಗಳಾಗಿದ್ದರು.

ಜಿ.ಎಲ್. ರಾವ್‌ರಿಂದ ಸ್ವಾಗತ, ಎಂ. ವಿ. ಶಂಕರ್‌ರಿಂದ ಮನವಿ ಪತ್ರ ಸಲ್ಲಿಕೆ ಮತ್ತು ಭಾಷಣ ನಡೆದವು. ಚಂದ್ರಹಾಸ ರಾವ್ ವಂದಿಸಿದರು.

ಕ. ವಿ. ಮಂ. ಬೇಜವಾಬ್ದಾರಿಗೆ ಬಾಲಕಿ ಬಲಿ

(1ನೇ ಪುಟದಿಂದ)

ಬೇಜವಾಬ್ದಾರಿ

ಆದರೆ ಈ ಘಟನೆಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಬೇಜವಾಬ್ದಾರಿ ಎದ್ದು ಕಾಣುತ್ತದೆ. ಮೃತ ವಿಜಯಲಕ್ಷ್ಮಿಯ ಕುಟುಂಬದವರು ತುಂಬಾ ಮುಗ್ಧರೂ ಆಗಿರುವುದರಿಂದ ಇಲಾಖೆಗಾಗಲಿ, ಪೋಲೀಸರಿಗಾಗಲಿ ದೂರು ಕೊಡದೆ ಶವ ಸಂಸ್ಕಾರ ಮಾಡಿದ್ದಾರೆ. ಆದರೆ ವಿದ್ಯುತ್ ಅಪಘಾತವೆಂಬುದು ಸತ್ಯವಾದ್ದರಿಂದ, ಮಾನವೀಯತೆಯ ದೃಷ್ಟಿಯಿಂದ ಈ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕು. ಮತ್ತು ವಿದ್ಯುಚ್ಛಕ್ತಿ ಅಧಿಕಾರಿಗಳು ಇನ್ನು ಮುಂದಾದರೂ ಕಾನೂನು—ಕಟ್ಟಳೆ—ಮೇಲಧಿಕಾರಿಗಳ ಕಡೆ ಕೈ ತೋರಿಸುವುದನ್ನು ಬಿಟ್ಟು, ಇಂಥ ದುರ್ಘಟನೆಗಳಿಗೆ ಅವಕಾಶವಾಗದಂತೆ ಕೆಲಸ ಮಾಡಬೇಕೆಂದು ಜನ ಆಗ್ರಹಿಸಿದ್ದಾರೆ.

ಶೃಂಗೇರಿಯ ಹೊಸ ಠಾಣಾಧಿಕಾರಿ ಐರೋಡಿ ರಾಮು ಅವರು ಈ ಘಟನೆಯ ತನಿಖೆ ಮುಂದುವರಿಸುತ್ತಿದ್ದಾರೆ.

ಅಡ್ಡಗದ್ದೆಯಲ್ಲಿ ಕಳ್ಳತನ

ಅಡ್ಡಗದ್ದೆ: ಇಲ್ಲಿನ ಅಂಚೆ ಕಚೇರಿಯಲ್ಲಿ ಹಾಗೂ ಹಾಲಂದೂರು ನಾಗಭೂಷಣ ಭಟ್ಟರ ಅಂಗಡಿಯಲ್ಲಿ ಜೂನ್ 15ರ ರಾತ್ರಿ ಯಾರೋ ಕಳ್ಳರು ಬಾಗಿಲಿನ ಚಿಲಕ ಮುರಿದು ಕಳವು ಮಾಡಿದ್ದಾರೆ.

ಅಂಚೆ ಕಚೇರಿಯಲ್ಲಿಡಲಾಗಿದ್ದ ಇ಼ ಲ್ಯಾಂಡ್ ಲೆಟರ್ ಹಾಗೂ ಇತರೆ ಅಂಚೆ ಸಾಮಗ್ರಿಗಳು, ಚಿಲ್ಲರೆ ಹಣವೂ ಸೇರಿದಂತೆ ಸುಮಾರು 125 ರೂ. ಗಳಿಗೂ ಮಿಕ್ಕಿ ದೋಚಿದ್ದು, ಅಂಗಡಿಯಲ್ಲಿಯೂ ಹಣದ ಪೆಟ್ಟಿಗೆಯನ್ನು ಒಡೆದು ಹಣವನ್ನೆಲ್ಲಾ ದೋಚಿಕೊಂಡು ಪರಾರಿಯಾಗಿದ್ದಾರೆ.

ಈ ಪ್ರಕರಣದ ಬಗ್ಗೆ ಶೃಂಗೇರಿ ಪೋಲೀಸ್ ಠಾಣೆಗೆ ದೂರು ಕೊಡಲಾಗಿದ್ದು ಠಾಣೆಯ ದಫೇದಾರ್‌ರವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಕ್ರಮ ಜರುಗಿಸಿದ್ದೂ ಅಲ್ಲದೇ ನೂತನವಾಗಿ ಠಾಣಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಐರೋಡಿ ರಾಮುರವರೂ ಸಹ ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ನಡೆಸಿದರು. ಹಾಗೂ ಅಂಚೆ ಇಲಾಖೆಯ ತನಿಖಾಧಿಕಾರಿಗಳು ಹಾಗೂ ಮೈಲ್ ಓವರ್ ಸಿಯರ್‌ರವರೂ ಬಂದು ಪರಿಶೀಲನೆ ನಡೆಸಿದರು.

ಶಂಕರ್ ಸಂಸ್ಥೆಯ ಡ್ರೈವರ್ ರಕ್ತವಾಂತಿಯಿಂದ ನಿಧನ

ಕೊಪ್ಪ: ಇಲ್ಲಿನ ಶಂಕರ್ ಕಂಪನಿಯ ಅನುಭವಿ ಚಾಲಕ ಮತ್ತು ಜಿಲ್ಲಾ ಟ್ರಾನ್ಸ್‌ಪೋರ್ಟ್ ಅಂಡ್ ಜನರಲ್ ಮಜ್ದೂರ ಸಂಘದ ಉಪಾಧ್ಯಕ್ಷರಾಗಿದ್ದ ಮೋಹನ್ ಕುಮಾರ್ ಜೂನ್ 14ರಂದು ಸಂಜೆ 4 ಗಂಟೆಯ ಹೊತ್ತಿಗೆ ಡ್ಯೂಟಿಯ ಮೇಲಿರುವಾಗಲೇ ರಕ್ತ ವಾಂತಿಯಾಗಿ ಮೃತಪಟ್ಟುದಾಗಿ ವರದಿಯಾಗಿದೆ.

38 ವರ್ಷದ ಅವರು ತಂದೆ–ತಾಯಿ, ಪತ್ನಿ ಮತ್ತು ತಮ್ಮಂದಿರನ್ನು ಅಗಲಿದ್ದಾರೆ.

ಜೂನ್ 15ರಂದು ಬಾಳಗಡಿಯಲ್ಲಿ ಮೃತರ ಶವ ಸಂಸ್ಕಾರ ನಡೆಯಿತು. ಸಂಘದ ಸದಸ್ಯರು, ಸಂಸ್ಥೆಯ ಕಾರ್ಮಿಕರು ಮತ್ತು ಕುಟುಂಬ ವರ್ಗದವರು ಸೇರಿದ್ದರು ಸಂಘದ ಖಜಾಂಚಿ ಸಂಜೀವ ಮೃತರ ಗುಣಗಾನ ಮಾಡಿದರು. ಮೃತರ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬಿ. ಎಂ. ಎಸ್. ರಾಜ್ಯ ಅಧ್ಯಕ್ಷ ಆರ್. ಶೇಷಾದ್ರಿ ಮೃತರ ಕುಟುಂಬದವರಿಗೆ ಕಾನೂನು ಬದ್ಧ ಪರಿಹಾರ ದೊರಕಿಸಲು ವ್ಯವಸ್ಥೆ ಮಾಡುವ ಭರವಸೆ ಕೊಟ್ಟುದಾಗಿ ಸಂಘದ ಪ್ರಕಟಣೆ ತಿಳಿಸಿದ್ದು, ಈ ಸಂಬಂಧ ತುಂಬಾ ಸಹಕರಿಸಿದ ಕೊಪ್ಪ ಠಾಣಾಧಿಕಾರಿ ದುರ್ಗಯ್ಯನವರಿಗೆ ಸಂಘ ಕೃತಜ್ಞತೆ ಸಲ್ಲಿಸಿದೆ.

ಕೊಪ್ಪದ ನಾಗರಿಕರಲ್ಲಿ ಪೌರ ಹಿತ ರಕ್ಷಣಾಸಮಿತಿಯ ವಿನಂತಿ

ಕೊಪ್ಪದ ನಲ್ಲಿ ಮೀಟರ್ ರೀಡಿಂಗ್ ವಿಚಾರದಲ್ಲಿ ಹೈಕೋರ್ಟಿಗೆ ಹೋಗುವ ಬಗ್ಗೆ ಆಯ್ದ ಕೆಲವು ಮಂದಿ ಸಾರ್ವಜನಿಕರಿಂದ ವಂತಿಗೆ ಪಡೆದಿತ್ತಷ್ಟೆ. ಆದರೆ ಕೊಪ್ಪ ಪುರಸಭೆಯನ್ನು ಮಂಡಲ ಪಂಚಾಯ್ತಿಯಾಗಿ ಸರ್ಕಾರ ಮಾರ್ಪಡಿಸಿದ ಹಿನ್ನೆಲೆಯಲ್ಲಿ ವಕೀಲರುಗಳ ಸಲಹೆಯ ಮೇರೆಗೆ ಕೋರ್ಟಿಗೆ ಹೋಗುವ ವಿಚಾರವನ್ನು ಮುಂದೂಡಲು ತೀರ್ಮಾನಿಸಬೇಕಾಯಿತು.

ಆದಾಗ್ಯೂ, ನಮ್ಮ ನಿರೀಕ್ಷೆಗೆ ಮೀರಿ ಸುಮಾರು 1600 ರೂ.ಗಳಷ್ಟು ಹಣ ಸಂಗ್ರಹವಾಗಿದ್ದಲ್ಲದೆ, ಈ ಹಣವನ್ನು ಒಂದು ಖಾಯಂ ನಿಧಿಯಾಗಿಟ್ಟುಕೊಂಡು ಮುಂದೆ ಇಂಥದೇ ಸಾರ್ವಜನಿಕ ಹಿತದ ಕೆಲಸಗಳಿಗೆ ಬಳಸಬೇಕೆಂದು ಹಲವು ಮಂದಿ ವಂತಿಗೆ ಕೊಟ್ಟವರೇ ಸಲಹೆ ಮಾಡಿದ್ದರ ಮೇರೆಗೆ ಹಣವನ್ನು ಸಮಿತಿಯ ಗೌರವ ಖಜಾಂಚಿಯವರಾದ ಹೆಚ್. ಶ್ರೀ ಶಶಿಕುಮಾರ್, ಮೇಲಿನಪೇಟೆ, ಕೊಪ್ಪ, ಇವರಲ್ಲಿ ಇಡಲಾಗಿತ್ತು.

ಆದರೆ ಯಾವುದೇ ಕಾರಣಕ್ಕೂ ಈ ಹಣ ದುರುಪಯೋಗವಾಗಬಾರದೆಂಬ ಕಾರಣಕ್ಕೆ ವಂತಿಗೆಯನ್ನು ಅವರವರಿಗೇ ಹಿಂದಿರುಗಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಬೆಂಗಳೂರಿಗೆ 2-3 ಪ್ರಯಾಣ ಮತ್ತಿತರ ಖರ್ಚು ವೆಚ್ಚಗಳನ್ನು ನಾಲ್ಕೈದು ಜನರು ಭರಿಸಿದ್ದಾರೆ. ಆದ್ದರಿಂದ ಸಾರ್ವಜನಿಕರ ಪೂರ್ತಿ ಹಣವನ್ನು ಹಿಂದಿರುಗಿಸಲಾಗುತ್ತಿದೆ.

ಮುಂದೆ ಅಗತ್ಯ ಬಿದ್ದಲ್ಲಿ ಇದೇ ರೀತಿ ಸಾರ್ವಜನಿಕರ ಸಹಕಾರ ಕೋರಲಾಗುತ್ತದೆ. ಈ ಸಂದರ್ಭದಲ್ಲಿ ಸಹಕರಿಸಿದ ಎಲ್ಲರಿಗೂ ಸಮಿತಿ ಈ ಊರಿನ ನಾಗರಿಕರ ಪರವಾಗಿ ಧನ್ಯವಾದ ಸಲ್ಲಿಸುತ್ತದೆ.

ಪೌರಹಿತ ರಕ್ಷಣಾ ಸಮಿತಿಯ ಪರವಾಗಿ,

ಎಂ. ಆರ್. ಕಣ್ಣನ್,

ಗೌ॥ ಕಾರ್ಯದರ್ಶಿ.

ಹರಿಹರಪುರ ಗ್ರಾಮ ಪಂಚಾಯ್ತಿಯ ಕಾರ್ಯಾಲಯ

ಹರಿಹರಪುರ–577120

"ಹರಾಜು ಪ್ರಕಟಣೆ"

ಹರಿಹರಪುರ ಗ್ರಾಮ ಪಂಚಾಯ್ತಿಗೆ ಸೇರಿದ ಸಾರಿಗೆ ನಿಲ್ದಾಣದಲ್ಲಿ ಇರುವ ಅಂಗಡಿ ಪೈಕಿ 2ನೇ ಅಂಗಡಿ ಮಳಿಗೆಯನ್ನು ಬಾಡಿಗೆಗೆ ಕೊಡುವ ಉದ್ದೇಶದಿಂದ ಮಾಹೆಯಾನ ಬಾಡಿಗೆ ಮೇಲೆ ಜುಲೈ 1ರಿಂದ ಡಿಸೆಂಬರ್ 31, 1986ರವರೆಗಿನ ಅವಧಿಗೆ ಬಹಿರಂಗ ಹರಾಜು ಮೂಲಕ ಕೊಡಲು ತೀರ್ಮಾನಿಸಿದ್ದು, ದಿನಾಂಕ 25-6-86ರಂದು ಬುಧವಾರ ಮಧ್ಯಾಹ್ನ 3 ಗಂಟೆಗೆ ಹರಿಹರಪುರ ಗ್ರಾಮ ಪಂಚಾಯ್ತಿ ಕಾರ್ಯಾಲಯದಲ್ಲಿ ಬಹಿರಂಗವಾಗಿ ಹರಾಜು ಮತ್ತು ವಿಲೇ ಮಾಡಲಾಗುವುದು. ಇಚ್ಛೆಯುಳ್ಳವರು ಛಡ ಸವಾಲ್‌ನಲ್ಲಿ ಪಡೆಯಬಹುದಾಗಿರುತ್ತೆ. ಹರಾಜಿನ ಷರತ್ತುಗಳನ್ನು ಪಂಚಾಯ್ತಿ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.

(ಸಹಿ) ಟಿ. ಎಸ್. ಶಂಕರಭಟ್, ಕಾರ್ಯದರ್ಶಿ.

(ಸಹಿ) ಸಿ. ಆನಂದನಾಯಕ್, ಆಡಳಿತಾಧಿಕಾರಿಗಳು.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.